
ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೫ ಫೆಬ್ರವರಿ-೨೦೦೫ ಸಂಚಿಕೆ-೨



ಗೊಂದಲಗಳ ಗೂಡಾಗುತ್ತಿರುವ ಭಾರತ

ಜನಪದ ವಿಚಾರದಲ್ಲಿ

ಫೆಬ್ರವರಿ ೨೦೦೫.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ-೨೦೦೫
ಸಂಪುಟ ೫
ಸಂಚಿಕೆ ೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

(08236)298754

e-mail - janapada@yahoo.com
web- www.janapada.org

ಶರಧಿ

ಒಳಲೊಳಗಿನ ಕಸವನ್ನು
ಮರಳ ದಂಡೆಗೆ ಚೆಲ್ಲಿ
ಮರುಳುತ್ತವೆ
ಅಲೆಗಳು ಮೌನವಾಗಿ

ಸಾಲು ಹಿಡಿದು ಸಾಗುವ
ನೊರೆ ನೊರೆ ತೆರೆಗಳಲ್ಲಿ
ಏಕಮುಖತೆಯು ಸುಳಿವಿಲ್ಲ
ಭೀಕರ ಗಂಭೀರ ಶಾಂತ ಅವಿಶ್ರಾಂತ

ಶಶಿಯ ನೋಟಕೆ ಉಕ್ಕುವ
ರವಿಯ ಸ್ಪರ್ಶಕೆ ಬಿಕ್ಕುವ ಶರಧಿ
ಇರುಳಲ್ಲಿ ಮಲಗುವುದಿಲ್ಲ
ಮರುಗುವುದಿಲ್ಲ ಕೊರಗುವುದಿಲ್ಲ
ಬಿಸಿಲಿನ ಝಳಕ್ಕೆ ಆವಿಯಾಗುವುದಿಲ್ಲ
ಕಾಲದೊಂದಿಗೆ ಬದಲಾಗುವ ಸಿದ್ಧಾಂತವನ್ನು
ರುದ್ರ ಸಮುದ್ರ ಒಪ್ಪುವುದಿಲ್ಲ

ಎಲ್ಲೆ ಮೀರದ ಅನಂತ ಚಲನೆಯಲ್ಲಿ
ನಿರಂತರ ಗೇಯತೆಯಿದೆ
ಕ್ಷಣದ ಸ್ತಬ್ಧತೆಯಿದೆ.

-ಅನಂತ ಹುದೆಂಗಜೆ

(ಸಾಭಾರ : ಸಂಚಯ)

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರೇ ಹೊಣೆ
(-ಸಂಪಾದಕರು)

ವಿಚಾರ ದೀಪ್ತಿ

ಈ ಇಪ್ಪತ್ತೈದು ವರ್ಷಗಳಲ್ಲಿ ಪುರುಷರು ಜಗತ್ತಿನ ವ್ಯವಸ್ಥೆಯನ್ನೆಲ್ಲ ಅಸ್ತವ್ಯಸ್ತವಾಗಿ ನಿರ್ವಹಿಸಿದ್ದಾರೆ. ಅದರಿಂದ ಜಗತ್ತು ಸಂಪೂರ್ಣ ಬೇಸರಗೊಂಡು ಬಿಟ್ಟಿದೆ ಮತ್ತು ಕಂಗಾಲಾಗಿದೆ. ಈ ಅವ್ಯವಸ್ಥಾಕಾಲದಲ್ಲಿ ಎರಡು ವಿಶ್ವಯುದ್ಧಗಳು ಆದವು ಮತ್ತು ಮೂರನೆಯದು ಯಾವಾಗ ಆದೀತು ಎಂದು ಹೇಳಬರದು. ಸ್ತ್ರೀ-ಪುರುಷರಿಬ್ಬರೂ ಸಮಾನರು ಎನ್ನುತ್ತಾ ಇವರು ಸ್ತ್ರೀಯರ ಕೈಯಲ್ಲಿಯೂ ಬಂದೂಕ ಕೊಡಲು ಇಚ್ಛಿಸುತ್ತಾರೆ ಮತ್ತು ಸ್ತ್ರೀಯರ ಸೈನ್ಯ ಕಟ್ಟಲಿಚ್ಛಿಸುತ್ತಾರೆ. ಇದಕ್ಕೆ ಸರಿವಿರುದ್ಧವಾಗಿ ಪುರುಷರನ್ನು ಇಂಥ ಕೆಲಸಗಳಿಂದ ಪರಾವೃತ್ತಗೊಳಿಸುವ ನಿಯಂತ್ರಣಶಕ್ತಿಯು ಸ್ತ್ರೀಯರ ಕೈಯಲ್ಲಿ ಬರಬೇಕು. ಮತ್ತು ತಮ್ಮ ಮಾತೃಶಕ್ತಿಯನ್ನು ಜೀವನದಲ್ಲಿಳಿಸಲು ಅವರಿಗೆ ಶಕ್ಯವಾಗಬೇಕು. ಹೀಗೆ ಮಾಡುವುದನ್ನು ಬಿಟ್ಟು ರಿಕ್ರೂಟಭರ್ತಿಯಲ್ಲಿ ಸ್ತ್ರೀಯರನ್ನು ಸೇರಿಸಿಕೊಳ್ಳುತ್ತಾರೆ ಮತ್ತು ಅವರ ಸಹಾಯವನ್ನು ಅಪೇಕ್ಷಿಸುತ್ತಾರೆ.

ಜಗತ್ತಿನಲ್ಲಿ ಇದೆಲ್ಲವೂ ನಿರ್ಭಯತೆ ಎಂಬ ಭ್ರಮೆಯಿಂದ ನಡೆಯುತ್ತದೆ ಮತ್ತು ಸ್ತ್ರೀಯರೂ ಸಹ ತಮ್ಮ ಕೈಯಲ್ಲಿ ಬಂದೂಕು ಬಂದು ಬಿಟ್ಟರೆ ತಾವೂ ನಿರ್ಭಯರಾಗುವೆವು ಎಂದು ತಿಳಿಯುತ್ತಾರೆ. ಆದರೆ ನಿರ್ಭಯತೆಗೂ ಬಂದೂಕಿಗೂ ಯಾವುದೇ ಸಂಬಂಧವಿಲ್ಲ. ಬಂದೂಕಿನ ಬಲದಿಂದ ನಿರ್ಭಯತೆಯು ಬರುತ್ತಿದ್ದರೆ ಇಂದು ಅಮೇರಿಕೆಯ ಹಾಗೂ ರಶಿಯಾದ ಜನರು ನಿರ್ಭಯರಾಗುತ್ತಿದ್ದರು. ಅವರ ಹತ್ತಿರ ಇಷ್ಟೆಲ್ಲಾ ಶಸ್ತ್ರಗಳಿವೆ. ಆದಾಗ್ಯೂ ಅವರ ಎದೆ ನಡಗುತ್ತಲಿದೆ. ಶರೀರದ ಉಷ್ಣತೆಯೂ ಕೂಡ ಸಾಧಾರಣ (ನಾರ್ಮಲ್) ಇರಲಿಕ್ಕಿಲ್ಲವೆಂದೇ ನಾನು ತಿಳಿಯುತ್ತೇನೆ. ಇಬ್ಬರೂ ಪರಸ್ಪರರಿಗೆ ಅಂಜುತ್ತಾರೆ. ಇವೆಲ್ಲವೂ ಪುರುಷರ ವ್ಯವಸ್ಥೆಯಲ್ಲಿ ಆಗಿವೆ. ಆದ್ದರಿಂದ ಈಗ ಸ್ತ್ರೀಯರು ಸಾಮಾಜಿಕ ಕ್ಷೇತ್ರದಲ್ಲಿ ಬರಬೇಕು. ಹಾಗೂ ಪುರುಷರ ಮೇಲೆ ನಿಯಂತ್ರಣ ಇಡುವ ಕೆಲಸವನ್ನು ಮಾಡಬೇಕು. ಭಾರತದ ಸ್ತ್ರೀಯರಿಂದ ನಾನು ಇದನ್ನೇ ಅಪೇಕ್ಷಿಸುತ್ತೇನೆ.

-ವಿನೋಬಾ

ಗೊಂದಲಗಳ ಗೂಡಾಗುತ್ತಿರುವ ಭಾರತ

-ಸುರೇಂದ್ರ ಕೌಲಗಿ

"ಬದುಕಿಗಾರ್ ನಾಯಕರು, ಏಕನೊ ಅನೇಕರೋ?
ವಿಧಿಯೊ ಪೌರುಷವೊ ಧರುಮವೊ ಅಂಧಬಲವೋ?
ಕುದುರುವದದೆಂತು ಈಯವ್ಯವಸ್ಥೆಯ ಪಾಡು?
ಅದಿಗುದಿಯೆ ಗತಿಯೇನೊ? ಮಂಕುತಿಮ್ಮ"

-ಡಿ.ವಿ.ಜಿ

ದೇಶಕ್ಕೆ ಸ್ವಾತಂತ್ರ್ಯವು ಗೊಂದಲಗಳ ಮಧ್ಯೆಯೇ ಬಂತು. ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿಯು ಸಹ ಗೊಂದಲಮಯವಾಗಿಯೇ ಇತ್ತು. ಇದು ಎಷ್ಟೊಂದು ಗೊಂದಲಮಯವಾಗಿತ್ತೆಂದರೆ ಸ್ವಾತಂತ್ರ್ಯ ಸಂಗ್ರಾಮದ ನಾಯಕರಾಗಿದ್ದ ಗಾಂಧಿಯವರಿಂದ ಈ ರೀತಿ ಉದ್ಗಾರವಾಚಕ ಮಾತುಗಳು ಹೊರಬಂದವು, "ಇಂದು ನನ್ನ ಮಾತನ್ನು ಯಾರು ಕೇಳುತ್ತಾರೆ? ಪ್ರತಿಯೊಬ್ಬರೂ ನನ್ನ ಭಾವಚಿತ್ರಗಳಿಗೆ, ವಿಗ್ರಹಗಳಿಗೆ ಮಾಲೆ ಹಾಕಲು ಉತ್ಸುಕರಾಗಿದ್ದಾರೆ. ಯಾರೊಬ್ಬರಿಗೂ ನಿಜವಾಗಿ ನನ್ನ ಉಪದೇಶವನ್ನು ಪಾಲಿಸಲು ಬೇಕಾಗಿಲ್ಲ."

ನಮ್ಮ ದೇಶದಲ್ಲಿರುವ ವೈವಿಧ್ಯತೆ, ಜನಸಂಖ್ಯಾ ಬಾಹುಳ್ಯ, ಧರ್ಮನಿರಪೇಕ್ಷನೀತಿ, ಅಣಕುಪ್ರಜಾಪ್ರಭುತ್ವ, ತಪ್ಪು ವಿದೇಶಾಂಗ ನೀತಿ, ಅರ್ಥನೀತಿ ಇತ್ಯಾದಿಗಳೆಲ್ಲವೂ ಸೇರಿ ಇತ್ತೀಚಿಗಿನ ವರ್ಷಗಳಲ್ಲಿ ನಮ್ಮ ದೇಶ ಗೊಂದಲಗಳ ಗೂಡಾಗುತ್ತಿದೆ. ಕಳೆದ ತಿಂಗಳಷ್ಟೆ ನಾವು ೫೬ ನೇ ಗಣರಾಜ್ಯೋತ್ಸವವನ್ನು ಆಚರಿಸಿದೆವು. ಯಾವ ಪ್ರಕಾರದ ಬಿಗಿ ಬಂದೋಬಸ್ತಿನಲ್ಲಿ ಆ ಉತ್ಸವವನ್ನು ಆಚರಿಸಿದೆವೊ ಅದನ್ನು ನೋಡಿದಾಗ ನಾವು ನಮ್ಮ ಗಣರಾಜ್ಯವನ್ನು ಯಾವುದೋ ಪರಕೀಯರ ಆಡಳಿತದಲ್ಲಿ ನೆರವೇರಿಸುತ್ತಿದ್ದೇವೆಂದು ಅನಿಸುತ್ತದೆ. ಅಷ್ಟೇ ಅಲ್ಲ ಗಣರಾಜ್ಯದ ಭಾಗವಾದ ದೇಶವಾಸಿಗಳೇ ಆ ಉತ್ಸವಕ್ಕೆ ವಿರೋಧಿಗಳಾಗಿದ್ದಾರೇನೋ ಎಂದೂ ಅನಿಸುತ್ತದೆ. ಗಣರಾಜ್ಯೋತ್ಸವ ಯಾವ ಅಹಿತಕರ ಘಟನೆಯೂ ಇಲ್ಲದೆ ನಡೆಯುವಂತೆ ಮಾಡಲು ಕೇಂದ್ರ ಸರ್ಕಾರ ನಿಯೋಜಿಸುವ ಪೋಲಿಸರ ಸಂಖ್ಯೆ, ಅರೆ ಸೈನಿಕರ ಸಂಖ್ಯೆ ಎಷ್ಟು ದೊಡ್ಡದಾಗಿರುತ್ತದೆಯೆಂದರೆ ಒಂದು ದೇಶದ ಮೇಲೆ ದಾಳಿ ಮಾಡಬಹುದಾದಷ್ಟು ಸಂಖ್ಯೆಯಲ್ಲಿರುತ್ತದೆ. ಭೂಮಿಯ ಮೇಲೆ ಕಾವಲು ಅಷ್ಟೇ ಅಲ್ಲ, ಆಕಾಶದ ಮೇಲಿನಿಂದಲೂ ಕಾವಲು ಇರುತ್ತದೆ. ಆ ಉತ್ಸವದಲ್ಲಿ ಭಾಗವಹಿಸಲು ಬರುವ ಪ್ರತಿಯೊಬ್ಬ ಪ್ರಜೆಯನ್ನೂ ಅನುಮಾನದ ದೃಷ್ಟಿಯಿಂದ ನೋಡಲಾಗುತ್ತದೆ. ಗಣರಾಜ್ಯೋತ್ಸವ ನಡೆಯುವುದು ಕೇವಲ

ಒಂದೆರಡು ಗಂಟೆ ಮಾತ್ರ. ಇಷ್ಟು ಕಡಿಮೆ ಕಾಲಾವಧಿಯಲ್ಲಿ ನಡೆಯುವ ಉತ್ಸವದ ಭದ್ರತೆಗಾಗಿ ಸರ್ಕಾರ ಖರ್ಚು ಮಾಡುವ ಹಣ ಹಲವಾರು ಕೋಟಿಯಲ್ಲಿರುತ್ತದೆ. ಇದುವರೆಗೆ ಗಣರಾಜ್ಯೋತ್ಸವದ ಖರ್ಚಿನ ವಿವರಗಳು ಬಹಿರಂಗಗೊಂಡಿಲ್ಲ. ಪಾರ್ಲಿಮೆಂಟಿನ ಒಂದು ದಿನದ ಸಭೆಗೆ ಎಷ್ಟು ಖರ್ಚಾಗುತ್ತದೆ, ಒಂದು ನಿಮಿಷಕ್ಕೆ ಎಷ್ಟು ಖರ್ಚಾಗುತ್ತದೆ ಇತ್ಯಾದಿ ವಿವರಗಳು ಆಗಾಗ್ಗೆ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುತ್ತವೆ. ಆದರೆ ಗಣರಾಜ್ಯೋತ್ಸವಕ್ಕಾಗಿ ಆಗುವ ಖರ್ಚಿನ ವಿವರಗಳು ಪ್ರಕಟಗೊಳ್ಳುವುದಿಲ್ಲ. ಇದಕ್ಕೆ ಕಾರಣ ಗೊತ್ತಾಗುತ್ತಿಲ್ಲ. ಇಂಥದೇ ಪರಿಸ್ಥಿತಿ ವರ್ಷಂಪ್ರತಿಯ ಸ್ವಾತಂತ್ರ್ಯೋತ್ಸವ ಸಮಾರಂಭಕ್ಕೂ ಅನ್ವಯಿಸುತ್ತದೆ. ಈ ಪ್ರಜಾಉತ್ಸವದ ದೊಡ್ಡ ಕಳಂಕದ ಮಾತೆಂದರೆ ದೇಶದ ಪ್ರಧಾನಮಂತ್ರಿ - ಯಾರನ್ನು ಜನತೆಯ ಪ್ರತಿನಿಧಿಯೆಂದು ತಿಳಿಯಲಾಗುತ್ತದೋ ಆ ವ್ಯಕ್ತಿ ಕೆಂಪು ಕೋಟೆಯ ಮೇಲೆ ನಿಂತು ಧ್ವಜಾರೋಹಣ ಮಾಡಿದ ನಂತರ ಮಾಡುವ ಭಾಷಣವನ್ನು ಗುಂಡು ನಿರೋಧಕ ರಕ್ಷಾಕವಚದ ಹಿಂದೆ ನಿಂತು ಮಾಡಲಾಗುತ್ತದೆ. ಆ ದಿನದ ಭಾಷಣವನ್ನು ಪ್ರಧಾನಿ ಮುಗಿಸಿ ತಮ್ಮ ಸ್ವ ಸ್ಥಳಕ್ಕೆ ಹಿಂದಿರುಗಿದರೆ ಇಡೀ ದೇಶವೇ ನಿಟ್ಟುಸಿರು ಬಿಡುತ್ತದೆ. ಇಲ್ಲಿ ಗಾಂಧೀಜಿಯವರು ನಡೆಸುತ್ತಿದ್ದ ಪ್ರಾರ್ಥನಾಸಭೆಯನ್ನು ಜ್ಞಾಪಿಸಿ ಕೊಳ್ಳುವುದು ಸೂಕ್ತ. ದಿಲ್ಲಿ, ಕಲ್ಕತ್ತ ಮತ್ತು ನೌಖಾಲಿಗಳಂಥ ಕೋಮು ಸಂಘರ್ಷಗಳಿಗೆ ಪೀಡಿತವಾಗಿದ್ದ ಪ್ರದೇಶಗಳಲ್ಲಿ ಗಾಂಧಿ ಬರಿ ಮೈಯಲ್ಲಿ ಧ್ಯಾನಾಸಕ್ತರಾಗಿ ಪ್ರಾರ್ಥನೆ ಮಾಡುತ್ತಿದ್ದರು. ಅವರಿಗೆ ಯಾವ ಭಯವೂ ಇರಲಿಲ್ಲ ಆದರೆ ಇಂದು ಜನಪ್ರತಿನಿಧಿಗಳಾದ ಮಂತ್ರಿಗಳು ತಮ್ಮ ಸುತ್ತ ಕಾವಲುಗಾರರ ಕೋಟೆಯನ್ನು ನಿರ್ಮಿಸಿಕೊಂಡೇ ಓಡಾಡುತ್ತಾರೆ ಇದು ಎಂಥ ಅವನತಿಯ ಸ್ಥಿತಿ!

ಹೀಗೆ ನಮ್ಮ ದೇಶದ ಎರಡು ಮಹಾನ್ ರಾಷ್ಟ್ರೀಯ ಉತ್ಸವಗಳಾದ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವಗಳು ಕಳೆದ ಐದು ದಶಕಗಳಿಂದ ನಡೆಯುತ್ತ ಬಂದಿವೆ. ಚಿಂತೆಯ ಸಂಗತಿಯೇನೆಂದರೆ ವರ್ಷಗಳು ಕಳೆದಂತೆ ಈ ಎರಡೂ ಉತ್ಸವಗಳಲ್ಲಿ ರಕ್ಷಣಾವ್ಯವಸ್ಥೆ ಬಿಗಿಗೊಳ್ಳುತ್ತ ಹೋಗುತ್ತಿದೆ. ಜೊತೆಗೆ ಇನ್ನೊಂದು ಇಷ್ಟೇ ಆತಂಕದ ಸಂಗತಿಯೇನೆಂದರೆ ದೇಶದ ಪ್ರತಿಯೊಂದು ರಾಜ್ಯದ ರಾಜಧಾನಿಯಲ್ಲಿ ನಡೆಯುವ ಸಮಾರಂಭಗಳೂ ಸಹ ಸೈನಿಕರ ಬಿಗಿ ಕಾವಲಿನ ಕೋಟೆಯ ಮಧ್ಯವೇ ನಡೆಯುತ್ತದೆ.

ಈ ರೀತಿ ಜನರ ಮೇಲಿನ ನಂಬಿಕೆಯನ್ನೇ ಕಳೆದುಕೊಂಡು ನಡೆಯುವ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವಗಳು ತಮ್ಮ ಹಿಂದಿರುವ ಭಾರತೀಯರ ಮೂಲಭೂತ ಭಾವನೆಗಳನ್ನೇ, ವಿಚಾರಗಳನ್ನೇ ಪ್ರಶ್ನಿಸುವಂತಾಗಿದೆ.

ಈ ಉತ್ಸವಗಳು ಎಷ್ಟು ಸಾಮಾನ್ಯತೆಗೆ ತುತ್ತಾಗಿವೆಯೆಂದರೆ ಈ ಉತ್ಸವಗಳಲ್ಲಿಯ ಮುಖ್ಯಪಾತ್ರ ಏನೂ ತಿಳಿಯದ ಶಾಲಾಬಾಲಕರದ್ದಾಗಿರುತ್ತದೆ; ಇನ್ನು ನಿಜವಾಗಿಯೂ ಹೊಣೆಗಾರಿಕೆಯ ಪಾತ್ರವನ್ನು ವಹಿಸಬೇಕಾಗಿರುವ

ಹಿರಿಯರು ಪ್ರತಿಭಟನೆ ಹಿಂಸಾಚಾರ, ಬಹಿಷ್ಕಾರ, ನಾಟಕೀಯತೆ, ಮೋಜುಗಾರಿಕೆ ಮುಂತಾದ ಕ್ರಿಯೆಗಳಲ್ಲಿ ತೊಡಗುತ್ತಾರೆ. ಎಲ್ಲಿಯೂ ಸ್ವಾತಂತ್ರ್ಯದ ಉಳಿಯುವಿಕೆಯ ಬಗ್ಗೆಯಾಗಲಿ, ಗಣರಾಜ್ಯದ ಜವಾಬ್ದಾರಿಗಳ ನಿರ್ವಹಣೆಯ ಕುರಿತಾಗಲೀ ಗಂಭೀರವಾದ ಚರ್ಚೆ ನಡೆಯುವುದಿಲ್ಲ. ಈ ವಿಷಯಗಳನ್ನು ಕುರಿತು ಮಾತನಾಡುವ, ಚಿಂತನೆ ಮಾಡುವ ಕೆಲಸ ಪ್ರಧಾನಮಂತ್ರಿಯದೂ, ರಾಷ್ಟ್ರಪತಿಯದೂ ಮಾತ್ರ ಆಗಿದೆಯೆಂದು ಭಾವಿಸುವ ಜನರೇ ಹೆಚ್ಚು. ಜನತೆಯಲ್ಲಿ ಹೊಕ್ಕಿರುವ ಈ ಪ್ರಕಾರದ ಮನೋರೋಗಕ್ಕೆ ಕನ್ನಡಿ ಹಿಡಿಯುವಂಥ ದೃಷ್ಟಾಂತವೊಂದಿದೆ. ಈ ಎರಡು ಮಹಾನ್ ರಾಷ್ಟ್ರೀಯ ಉತ್ಸವಗಳ ಸಂದರ್ಭದಲ್ಲಿ ವ್ಯಾಪಕವಾಗಿ ಬಳಕೆಗೆ ಬರುವ ಪ್ಲಾಸ್ಟಿಕ್ ರಾಷ್ಟ್ರಧ್ವಜಗಳು ಸಮಾರಂಭ ಮುಗಿಸಿ ಹಿಂದಿರುಗುವ ಜನತೆಯ ಕಾಲ್ತುಳಿತಕ್ಕೆ ಯಾವ ಸಂಕೋಚವೂ ಇಲ್ಲದೆ ಒಳಗಾಗುವಂಥದು. ಇದು ಇಂದಿನ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವಗಳ ಸ್ಥಿತಿಯಾದರೆ, ಐವತ್ತು ವರ್ಷಗಳ ಹಿಂದೆ ಈ ಎರಡು ಉತ್ಸವಗಳ ಬಗ್ಗೆ ಭಾರತೀಯರು ಎಂಥ ಉದಾತ್ತವಾದ ಭಾವನೆ, ಎಂಥ ಮಹಾನ್ ಕಲ್ಪನೆಗಳನ್ನು ಹೊಂದಿದ್ದರೆಂದರೆ ಈ ಉತ್ಸವಗಳನ್ನು ಆಚರಿಸುವುದು ತಮ್ಮ ಭಾಗ್ಯವೆಂದೂ, ಅವುಗಳಲ್ಲಿ ಭಾಗವಹಿಸುವುದು ತಮ್ಮ ಪವಿತ್ರ ಕರ್ತವ್ಯವೆಂದೂ, ಅವುಗಳ ಉತ್ತಮ ಆಚರಣೆ ತಮ್ಮ ಧರ್ಮವೆಂದೂ ಭಾವಿಸಿದ್ದರು.

ದೇಶದ ಮೊದಲ ಪ್ರಧಾನಿ ನೆಹರು ಆಗಸ್ಟ್ ೧೪ರ ಮಧ್ಯ ರಾತ್ರಿಯಂದು ಪಾರ್ಲಿಮೆಂಟ್ನಲ್ಲಿ ಮಾಡಿದ "ದೈವದೊಂದಿಗೆ ಒಪ್ಪಂದ" ಎಂಬ ಭಾಷಣ ಸುವಿಖ್ಯಾತವೂ ಐತಿಹಾಸಿಕವೂ ಆಗಿದೆ. ನೆಹರೂ ತಮ್ಮ ಆ ಅಭೂತಪೂರ್ವ ಭಾಷಣದ ಮೂಲಕ ವ್ಯಕ್ತಪಡಿಸಿದ ವಿಚಾರಗಳು ಸ್ವತಂತ್ರ ಭಾರತದ ಗಾಳಿಯಲ್ಲಿ ಲೀನವಾದವು.

ರಾಷ್ಟ್ರಕವಿ ರವಿಂದ್ರನಾಥ ಟಾಗೋರ್ ತಮ್ಮ ಒಂದು ಕವನದಲ್ಲಿ ಅಭಿವ್ಯಕ್ತಿಸಿದ ಆಶಯ ಹೀಗಿತ್ತು :-

ಎಲ್ಲಿ ವಿವೇಚನೆಯ ಸ್ವಚ್ಛ ತೊರೆ, ಜಡ ಸಂಪ್ರದಾಯದ ಮರಳು ಬೀಳಿನಲಿ ಇಂಗಿಲ್ಲವೋ ಅಲ್ಲಿ ಆ ಸ್ವಾತಂತ್ರ್ಯನಂದನದಿ, ಈ ನನ್ನರಾಷ್ಟ್ರವನ್ನು ಎಚ್ಚರಿಸು ಏ ತಂದೆ.

ಈ ಇಬ್ಬರು ಶ್ರೇಷ್ಠ ಭಾರತೀಯರ ಭಾವನೆಗಳು, ವಿಚಾರಗಳು ಸುಳ್ಳಾಗುವಂಥ ಪರಿಸ್ಥಿತಿ ಏಕೆ ಬಂದಿದೆ ಎಂಬ ಬಗ್ಗೆ ಯಾರೂ ಚಿಂತನೆ ಮಾಡುತ್ತಿಲ್ಲವಲ್ಲ ಎಂಬ ಕೊರಗು ಎಲ್ಲರದೂ ಆಗಿದೆ.

ದೇಶಕ್ಕೆ ಸ್ವಾತಂತ್ರ್ಯವನ್ನು ತಂದದ್ದೇನೋ ಆಯಿತು, ಗಣರಾಜ್ಯವನ್ನು ಸ್ಥಾಪಿಸಿದ್ದೇನೋ ಆಯಿತು ಆದರೆ ನಾವು ಸ್ಥಾಪಿಸಿದ ಸರ್ಕಾರವೇ ಎಲ್ಲ ಆಶೋತ್ತರಗಳ ಅನುಷ್ಠಾನಕ್ಕೆ ವಿಘ್ನ ಸ್ವರೂಪವಾಗಿದೆ. ಇದೊಂದು ವಿಪರ್ಯಾಸ. ಈಗ ನಮ್ಮ ಅನುಭವದ ಪ್ರಕಾರ ಪರಿಹಾರಗಳು ಸಮಸ್ಯೆಯಾಗುವುದಿಲ್ಲ ಬದಲಿ

ಸರ್ಕಾರವೇ ಒಂದು ಸಮಸ್ಯೆಯಾಗಿದೆ. ಅತ್ಯಂತ ಕಡಿಮೆ ಆಳುವ ಸರ್ಕಾರವೇ ಶ್ರೇಷ್ಠ ಸರ್ಕಾರವಾಗಿರುತ್ತದೆಂಬ ಮಾತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸುಳ್ಳಾಗುತ್ತ ಬಂದಿದೆ. ಇಂಗ್ಲೀಷರ ಕಾಲದಲ್ಲಿ ದೇಶದ ಬಡ ಜನತೆ ಸರ್ಕಾರವನ್ನೇ ತನ್ನ ತಾಯಿ ತಂದೆ ಎಂದೂ ತನ್ನ ದೈವವೆಂದೂ ಭಾವಿಸಿತ್ತು. ಇದಕ್ಕಿಂತ ಭಿನ್ನವಾದ ಮನೋಧರ್ಮ ಇಂದಿನ ಭಾರತೀಯರಲ್ಲಿಲ್ಲ. ಈ ವಿಚಾರದಲ್ಲಿ ಹಿಂದಿನ ಭಾರತೀಯರಿಗಿಂತ ಇಂದಿನ ಭಾರತೀಯರ ಕೈ ಮೇಲಾಗಿದೆ. ವಿಕೇಂದ್ರೀಕರಣದ ಅಗತ್ಯತೆಯ ಫಲವಾಗಿ ಪಂಚಾಯತ್‌ರಾಜ್ಯವೇನೋ ಜಾರಿಗೆ ಬಂದಿತು, ಆದರೆ ಭೂಮಟ್ಟದಲ್ಲಿಯ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಇದುವರೆಗೆ ದೂರದ ಸರ್ಕಾರವನ್ನು ಎಲ್ಲಕ್ಕೂ ಅವಲಂಬಿಸಿದ್ದ ಪ್ರಜೆ ಈಗ ತನ್ನ ಗ್ರಾಮದ ಪಂಚಾಯತ್‌ನ್ನು ಅವಲಂಬಿಸಬೇಕಾಗಿದೆ. ಮೊದಲಾದರೋ ಅವನ ಸಮಸ್ಯೆಗಳ ಪರಿಹಾರ ಅಧಿಕಾಶಾಹಿಯಿಂದ ಕಾನೂನು ನಿಯಮಾವಳಿಗಳ ಆಧಾರದ ಮೇಲೆ ಆಗುತ್ತಿತ್ತು. ಆದರೆ ಇಂದೋ ಜಾತಿಯ ಆಧಾರದ ಮೇಲೆ, ಕ್ಷುಲ್ಲಕ ಓಟಿನ ರಾಜಕೀಯದ ಆಧಾರದ ಮೇಲೆ, ವ್ಯಕ್ತಿಗತ ಸಂಬಂಧಗಳ ಮೇಲೆ ಆಗಬೇಕಾಗಿ ಬಂದಿದೆ. ಹೀಗಾಗಿ ಸಮಸ್ಯೆಯ ಕ್ಲಿಷ್ಟತೆ ಹೆಚ್ಚಾಗುತ್ತಿದೆ, ಅದರ ಪರಿಹಾರ ಇನ್ನೂ ಕ್ಲಿಷ್ಟದಾಯಕವಾಗುತ್ತಿದೆ. ಜನರಲ್ಲಿ ಅಸಂತೋಷವೂ ಹೆಚ್ಚಾಗುತ್ತಿದೆ. ಈ ಅಪಾಯದ ಸಂಕೇತವಾಗಿ ನಮ್ಮ ರಾಜಕೀಯದ ಅಪರಾಧೀಕರಣ ರಾಜಾರೋಷವಾಗಿ ನಡೆಯುತ್ತಿದೆ, ರಾಜಕೀಯಪ್ರೇರಿತ ಕೊಲೆಗಳಾಗುತ್ತಿವೆ, ರಾಜಕೀಯದ ಜಾತೀಕರಣವಾಗುತ್ತಿದೆ. ಸಂವಿಧಾನವಿಲ್ಲದೆ ಪ್ರಜಾತಂತ್ರವಿಲ್ಲ, ಪ್ರಜಾತಂತ್ರವಿಲ್ಲದೆ ಗಣತಂತ್ರವಿಲ್ಲ. ಆದರೆ ಈ ಐವತ್ತು ವರ್ಷಗಳಲ್ಲಿ ಭಾರತೀಯರ ನೈತಿಕತೆ ಮತ್ತು ಬುದ್ಧಿಮತ್ತತೆಯಲ್ಲಿ ಎಷ್ಟೊಂದು ಕುಸಿತವಾಗಿದೆಯೆಂದರೆ ಜನತೆಗೆ ಈ ಎರಡೂ ವ್ಯವಸ್ಥೆಗಳಲ್ಲಿ ನಂಬಿಕೆ ಹೋಗಿಬಿಡುವ ಅಪಾಯದ ಸಂಕೇತಗಳು ಭಾರತ ರಾಜಕಾರಣದ ಕ್ಷಿತಿಜದಲ್ಲಿ ಕಾಣಿಸಿಕೊಳ್ಳುತ್ತಿವೆ. ಜನಸಾಮಾನ್ಯರ ದೃಷ್ಟಿಯಲ್ಲಿ ಚುನಾವಣೆಗಳೆಂದರೆ ರಾಜಕೀಯ ಪಕ್ಷಗಳಮೇಲಾಟ, ಹಣದ ಹೊಳೆ ಹರಿಸುವುದು; ಲೋಕಸಭೆ ಮತ್ತು ಗ್ರಾಮ ಸಭೆಗಳೆಂದರೆ ಕುಸ್ತಿ ಮಾಡುವುದು, ಸರ್ಕಾರವೆಂದರೆ ನಿರಂತರವಾಗಿ ಹಾಲು ಕೊಡಬೇಕಾದ ಹಸು, ಶಿಕ್ಷಣವೆಂದರೆ ಹೊಟ್ಟೆಗೆ ಹಿಟ್ಟು ಪಡೆಯಲು ಚೀಟಿ, ಹಕ್ಕುಗಳೆಂದರೆ ಕರ್ತವ್ಯವಿಲ್ಲದೆ ಚಲಾಯಿಸುವ ನಾಣ್ಯ; ಧರ್ಮನಿರಪೇಕ್ಷತೆ ಎಂದರೆ ಧರ್ಮಗಳ ಓಲೈಕೆ, ಬಹುಮತ ಮತ್ತು ಅಲ್ಪಮತವೆಂದರೆ ಬಹುಸಂಖ್ಯಾತರಿಂದ ಅಲ್ಪಸಂಖ್ಯಾತರ ದಮನ, ವಿದೇಶನೀತಿಯೆಂದರೆ ಅಮೇರಿಕಾದ ಕೈಗೊಂಬೆಯಾಗುವಿಕೆ, ಕಾಶ್ಮೀರ ಸಮಸ್ಯೆಯ ಪರಿಹಾರವೆಂದರೆ ಪಾಕಿಸ್ತಾನದ ವಿರುದ್ಧ ಸಮರ ಸಾರುವುದು, ಉದಾರೀಕರಣವೆಂದರೆ ಭಾರತೀಯತನವನ್ನು ವಿಕ್ರಯಿಸಿಕೊಳ್ಳುವುದು, ಜಾತಿ ಸೌಹಾರ್ದತೆಯೆಂದರೆ, ಒಂದು ಜಾತಿಯನ್ನು ಇನ್ನೊಂದು ಜಾತಿಯ ವಿರುದ್ಧ ಎತ್ತಿ ಕಟ್ಟುವುದು ಹೀಗೆ ಸಾಗುತ್ತ ಹೋಗುತ್ತದೆ

ಗೊಂದಲಗಳ ಸರಮಾಲೆ.

ಈ ಎಲ್ಲ ಗೊಂದಲಗಳ ಮೂಲ ನಮಗೆ ನಮ್ಮ ಸ್ವಾತಂತ್ರ್ಯ ಆಂದೋಲನದಲ್ಲಿಯೇ ದೊರೆಯುತ್ತದೆ. ನಮ್ಮ ಆ ಆಂದೋಲನ ಧರ್ಮಗಳ ಜಗಳದ ಗೊಂದಲ, ಭಾಷಾ ಗೊಂದಲ, ಜಾತಿ ಗೊಂದಲ, ದೇಶ ವಿಭಜನೆಯ ಗೊಂದಲ ಇತ್ಯಾದಿ ಗೊಂದಲಗಳ ಮಧ್ಯ ನಡೆದು ಕೊನೆಗೆ ಗೊಂದಲಗಳ ಮಧ್ಯವೇ ಸ್ವಾತಂತ್ರ್ಯ ಲಭಿಸಿತು. ಈ ಗೊಂದಲಗಳ ಪರಿಣಾಮ ನಮ್ಮ ಸಂವಿಧಾನದ ಮೇಲೆ ಆಗದೇ ಇರಲಿಲ್ಲ. ಸಂವಿಧಾನದ ರಚನೆಯ ಸಮಯದಲ್ಲಿ ದೇಶದಲ್ಲಿ ಎಷ್ಟೊಂದು ಗೊಂದಲ ಇತ್ತೆಂದರೆ ಸಂವಿಧಾನ ರಚನಾ ಸಭೆಯ ಸದಸ್ಯರೆಲ್ಲರ ದೃಷ್ಟಿ ಮಂಕಾಗಿತ್ತು. ಭಾರತದ ನೆಲೆಯೇನು, ಗುರಿಯೇನು ಎಂಬುದನ್ನು ಸ್ಪಷ್ಟವಾಗಿ ಅರಿಯದೇ ಹೋದರು. ಪೂರ್ಣವಾಗಿ ಪಶ್ಚಿಮದ ರಾಜಕೀಯ ವಿಚಾರಕ್ಕೆ, ಪಶ್ಚಿಮ ಸಂಸ್ಕೃತಿಯ ವ್ಯಾಮೋಹಕ್ಕೆ, ಪಶ್ಚಿಮದ ಅರ್ಥಶಾಸ್ತ್ರ ಪ್ರಭಾವಕ್ಕೆ ಒಳಗಾದರು. ಆದ್ದರಿಂದ ನಮ್ಮ ಸಂವಿಧಾನ ಮತ್ತು ಸಂವಿಧಾನದಿಂದ ಹೊರಬಂದ ಪರಿಣಾಮಗಳು ಭೀಕರವಾಗುತ್ತವೆಂಬುದರಲ್ಲಿ ಸಂವಿಧಾನ ರಚನಾಕಾರರಿಗೆ ಸಂಶಯವಿರಲಿಲ್ಲವೆಂದು ತೋರುತ್ತದೆ. ಸಂವಿಧಾನದ ಮೂಲತತ್ವಗಳ ಬಗ್ಗೆಯೇ ಮೂಲತಃ ಗೊಂದಲವಿದ್ದಿತು. ಆ ಗೊಂದಲದ ಪರಿಣಾಮ ಸಂವಿಧಾನ ರಚನೆಯ ೫೬ ವರ್ಷಗಳ ನಂತರವೂ ಕಂಡು ಬರುತ್ತಿದೆ. ಆ ಗೊಂದಲದ ಮೊಟ್ಟ ಮೊದಲನೆಯ ವಿಷಯ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ಕೊಡುವ ಬಗ್ಗೆಯೇ ಇದ್ದಿತು. ಪ್ರಾಚೀನ ಕಾಲದಿಂದಲೂ ಗ್ರಾಮಗಳು ಸ್ವರಾಜ್ಯದ ಉದಾಹರಣೆಯಾಗಿವೆ. ಅವುಗಳ ಈ ಗುಣಲಕ್ಷಣವನ್ನೇ ಆಧಾರವಾಗಿಟ್ಟುಕೊಂಡು ಸಂವಿಧಾನದ ರಚನೆಯಾಗಬೇಕೆಂಬುದು ಕೆಲವರ ವಾದವಾದರೆ, ಆ ಗ್ರಾಮಗಳು ತಮ್ಮೆಲ್ಲ ಕೆಲ ಒಳ್ಳೆಯ ಗುಣಗಳೊಂದಿಗೆ ಜಾತಿಯತೆ, ಸಂಕುಚಿತತೆ, ಪ್ರತಿಗಾಮಿಯತೆ ಶ್ರೇಣಿಕತೆ, ಮೂಢತೆ, ಇತ್ಯಾದಿ ಸಾಮಾಜಿಕ ಕುಪದ್ಧತಿಗಳನ್ನೂ ಹೊಂದಿರುವುದರಿಂದ ಸಾಧ್ಯವಾದಷ್ಟು ಆ ಪ್ರಾಚೀನ ಪದ್ಧತಿಯ ಗ್ರಾಮಗಳನ್ನು ತೆಗೆದುಹಾಕಿ ೨೦ನೇ ಶತಮಾನಕ್ಕೆ ಅನುಗುಣವಾದ ಸಮಾಜ ರಚನೆಗೆ ಅನುಕೂಲವಾದ ಸಂವಿಧಾನದ ರಚನೆಯಾಗಬೇಕೆಂದು ಇನ್ನು ಕೆಲವರ ವಾದವಾಗಿತ್ತು. ಸಂವಿಧಾನ ರಚನೆಯಿಂದಾದ ಎರಡನೆಯ ವಿರೋಧಾಭಾಸ ರಾಜ್ಯದ ಧರ್ಮನಿರಪೇಕ್ಷತೆಗೆ ಸಂಬಂಧಿಸಿದ್ದು. ಇಂದು ದೇಶದಲ್ಲಿ ಉಂಟಾಗಿರುವ ಅನೇಕ ಮತೀಯಗೊಂದಲಗಳಿಗೆ ಧರ್ಮನಿರಪೇಕ್ಷತೆಯ ತಪ್ಪು ತಿಳುವಳಿಕೆಗಳೇ ಬಹಳಷ್ಟು ಕಾರಣವಾಗಿವೆ. ಕೊನೆಗೂ ಈ ಗೊಂದಲಗಳನ್ನು ನಿವಾರಿಸಲು ಸಾಧ್ಯವಾಗಿಲ್ಲ. ಈಗಲೂ ಸಹ ಆ ಗೊಂದಲಗಳು ಸಜೀವವಾಗಿಯೇ ಇವೆ. ಈ

ವಸ್ತುಸ್ಥಿತಿಯನ್ನು ತಿಳಿದಿದ್ದ ಅಂಬೇಡ್ಕರರು ೧೯೪೯ ಸೆಪ್ಟೆಂಬರ್ ೫ ರಂದು ಸಂವಿಧಾನ ಸಭೆಗೆ ಒಂದು ಎಚ್ಚರವನ್ನು ಕೊಟ್ಟರು. ಅದು ಹೀಗಿತ್ತು "೧೯೫೦ **ಜನವರಿ ೨೬ ನೇ ತಾರೀಖಿನ ದಿನ ಭಾರತವು ವಿರೋಧಾಭಾಸಗಳಿಂದ ಕೂಡಿರುವ ಜೀವನದಲ್ಲಿ ಪಾದಾರ್ಪಣೆ ಮಾಡುವುದು."** ಅಂಬೇಡ್ಕರರು ನುಡಿದಿದ್ದ ಆ ಎಚ್ಚರಿಕೆಯ ಮಾತು ದೇಶವು ತನ್ನ ೫೬ನೇ ಗಣರಾಜ್ಯೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಇನ್ನೂ ಹೆಚ್ಚು ಕರ್ಣಕಠೋರವಾಗಿ ಮರುಧ್ವನಿಸುತ್ತಿದೆ. ಆದರೂ ಅಂಬೇಡ್ಕರರು ಮುಂಗಾಣಿದ್ದ ಮತ್ತು ಈಗ ವಾಸ್ತವವಾಗಿರುವ ಆ ವಿರೋಧಾಭಾಸಗಳನ್ನು ನಿವಾರಿಸುವ ಪ್ರಯತ್ನ ಎಳ್ಳಷ್ಟೂ ನಡೆದಿಲ್ಲ. ದಿನಗಳುರುಳಿದಂತೆ ಮತ್ತು ವಿಶ್ವೀಕರಣ ವಾಣಿಜ್ಯಕರಣ, ಖಾಸಗೀಕರಣ ಅಮೇರಿಕಿಕರಣ, ಶಸ್ತ್ರೀಕರಣ ಇತ್ಯಾದಿ ಕಾರಣದಿಂದಾಗಿ ವಿರೋಧಾಭಾಸಗಳು ಹೆಚ್ಚಾಗುತ್ತಲೇ ಇವೆ. ಇದರಿಂದಾಗಿ ಸಮಾಜದಲ್ಲಿ ಅಶಾಂತಿ, ಅಸಂತೋಷ, ಹಿಂಸೆ, ತುಮುಲಗಳು ಹೆಚ್ಚಾಗುತ್ತಿವೆ, ಗಾಬರಿಯ ವಿಷಯವೆಂದರೆ ಇವು ಪ್ರಜಾತಂತ್ರ ವ್ಯವಸ್ಥೆಯನ್ನೇ ಬುಡಮೇಲು ಮಾಡಬಹುದು. ೧೯೪೭ರಲ್ಲಿ ನಾವು ರಾಜಕೀಯ ಸ್ವಾತಂತ್ರ್ಯ ಮತ್ತು ೧೯೫೦ರಲ್ಲಿ ಗಣರಾಜ್ಯವನ್ನು ಹೊಂದಿದ್ದರೂ ನಾವು ಮಹೋನ್ನತ ವಿಚಾರದ, ಮಹೋನ್ನತ ಆದರ್ಶದ, ಮಹೋನ್ನತ ನೈತಿಕತೆಯ, ಮಹೋನ್ನತ ಸಂಸ್ಕೃತಿಯುಳ್ಳ ಮಾನವರಿರುವ ಹೊಸ ಸಮಾಜವನ್ನು ರಚಿಸಲು ವಿಫಲರಾಗಿದ್ದೇವೆ. ಈ ವಿಫಲತೆಗಳಿಂದ ಬಿಡುಗಡೆ ಹೊಂದುವುದಕ್ಕೂ ಪ್ರಜಾತಂತ್ರ ವ್ಯವಸ್ಥೆಯೇ ಬೇಕೆಂಬುದು, ಗಣರಾಜ್ಯವೇ ಬೇಕೆಂಬುದು ಕೂಡ ಸೂರ್ಯನ ಬೆಳಕಿನಷ್ಟೇ ಸ್ಪಷ್ಟ. ಹೀಗೆ ವಿಚಾರ ಮಾಡುವಾಗ ನಾವು ಪುನಃ ವಿರೋಧಾಭಾಸಗಳ ಮಧ್ಯ ಸಿಲುಕಿಕೊಳ್ಳುತ್ತೇವೆ. ಗಣರಾಜ್ಯ ಮತ್ತು ಪ್ರಜಾತಂತ್ರಗಳಿಲ್ಲದೆ ಮಾನವನ ಏಳ್ಗೆ ಸಾಧ್ಯವಿಲ್ಲ. ಆದರೆ ಮಾನವನ ಏಳ್ಗೆಗೆ ಇಂದಿನ ಸ್ವರೂಪದಲ್ಲಿರುವ ಗಣರಾಜ್ಯ ಮತ್ತು ಪ್ರಜಾತಂತ್ರ ಸಮರ್ಥವಾಗಿಲ್ಲ. ಮಾನವನ ಸರ್ವತೋಮುಖ ಏಳಿಗೆ ಗುರಿಯಾಗಿದ್ದರೆ, ಪ್ರಜಾತಂತ್ರ ಮತ್ತು ಗಣರಾಜ್ಯ ಆ ಗುರಿಯ ಈಡೇರಿಕೆಗೆ ಸಾಧನಗಳಾಗಿವೆ. ಈಗಾಗಲೇ ವರ್ಣಿಸಿರುವಂತೆ ಭಾರತ ಇಂದು ಗೊಂದಲಗಳ ಬೀಡಾಗಿದೆ. ಈ ಗೊಂದಲದ ವಿಷ ವರ್ತುಲದಿಂದ ಪ್ರಜಾತಂತ್ರವನ್ನೂ, ಗಣರಾಜ್ಯವನ್ನೂ ಹೇಗೆ ಮೇಲಕ್ಕೆತ್ತಬೇಕೆಂಬುದೇ ಇಂದಿನ ಭಾರತೀಯನ ಮುಂದೆ ಇರುವ ಪ್ರಶ್ನೆಯೂ ಆಗಿದೆ, ಹೋರಾಟವೂ ಆಗಿದೆ.

ಕನ್ನಡಕ್ಕೆ 'ಶಾಸ್ತ್ರೀಯ' ಭಾಷೆಯ ಬೇಡಿಕೆ

-ಬರಗೂರು ರಾಮಚಂದ್ರಪ್ಪ

ತಮಿಳುನಾಡಿನವರು ತಮ್ಮ ಭಾಷೆಗೆ 'ರಾಷ್ಟ್ರೀಯ ಭಾಷೆ'ಯ ಸ್ಥಾನಮಾನ ಬೇಕೆಂದು ಕೇಳಿದ ಕೂಡಲೇ ಕನ್ನಡಪರ ಬುದ್ಧಿವಲಯವೊಂದು ಜಾಗೃತವಾಗಿ ಕನ್ನಡಕ್ಕೂ ರಾಷ್ಟ್ರೀಯ ಭಾಷೆಯ ಸ್ಥಾನಮಾನ ಬೇಕೆಂದು ಕೇಳುತ್ತಿದೆ. ಮಲೆಯಾಳಿ, ತೆಲಗು, ಮರಾಠಿ ಮುಂತಾದ ಭಾಷಿಕರು ಈ ಬಗ್ಗೆ ಒತ್ತಾಯ ಮಾಡಿದ ವರದಿಗಳಿಲ್ಲ. ಒಂದು ವೇಳೆ ತಮಿಳುನಾಡಿನವರು ತಮ್ಮ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಕೇಳದಿದ್ದರೆ ಕನ್ನಡ ನಾಡಿನವರೂ ಕೇಳುತ್ತಿರಲಿಲ್ಲವೇನೊ! ಇಷ್ಟಕ್ಕೂ 'ಶಾಸ್ತ್ರೀಯ ಭಾಷೆ'ಯೆಂಬ ವರ್ಗೀಕರಣವೊಂದು ಕೇಂದ್ರ ಸರ್ಕಾರದ ಕಡತಗಳಲ್ಲಿದೆ ಎಂದು ಗೊತ್ತಿರಬೇಕಲ್ಲ? ಇಷ್ಟಕ್ಕೂ ಶಾಸ್ತ್ರೀಯ ಭಾಷೆ ಎಂದರೇನು? ಆ ರೀತಿಯ ವರ್ಗೀಕರಣ ವೈಜ್ಞಾನಿಕವೆ? – ಈ ಪ್ರಶ್ನೆಗಳು ಕೆಲವರನ್ನು ಹೊರತುಪಡಿಸಿ ಅನೇಕರಿಗೆ ಅಪ್ರಸ್ತುತವಾಗಿ ಕಾಣುತ್ತಿವೆ. ತಮಿಳುನಾಡಿನವರು ಕೇಳಿ ಪಡೆದ ಮೇಲೆ ನಮಗೇಕೆ ಬೇಡ, ನಾವೇನು ಕಡಿಮೆ, ನಮ್ಮ ಭಾಷೆಯೇನು ಕಡಿಮೆ ಎಂದಷ್ಟೇ ಭಾವಿಸುವರ ಸಂಖ್ಯೆ ಜಾಸ್ತಿ. ಇದರರ್ಥ ಕನ್ನಡಕ್ಕೆ 'ಶಾಸ್ತ್ರೀಯ ಭಾಷೆ'ಯ ಸ್ಥಾನಮಾನ ಬೇಡವೆಂದಲ್ಲ. ಈ ಬಗ್ಗೆ ವಿವೇಕ ಮತ್ತು ಔಚಿತ್ಯಗಳಿಂದ ಚರ್ಚಿಸುವ ವಾತಾವರಣವೂ ಬೇಕು. ಇಲ್ಲದಿದ್ದರೆ ಭಾಷಾ ಚಳುವಳಿಯೆಂಬುದು ಕೇವಲ ಭಾವೋದ್ರೇಕದ ಬೆಲೂನಾಗುವುದೇ ಹೆಚ್ಚು.. ತಮಿಳುನಾಡಿನವರ ಒತ್ತಾಯವಿಲ್ಲದಿದ್ದರೆ ಕನ್ನಡದ ಮುಂಚೂಣಿ ಬುದ್ಧಿವಂತರಿಗೆ ಶಾಸ್ತ್ರೀಯ ಭಾಷಾಸ್ಥಾನಮಾನದ ವಿಷಯ ಹೊಳೆಯುತ್ತಲೇ ಇರಲಿಲ್ಲವೆಂಬುದು ಭಾಷಾ ಹೋರಾಟದ ಒಂದು ವ್ಯಂಗ್ಯವೆಂದೇ ನನ್ನ ಭಾವನೆ.

ಈಗ 'ಶಾಸ್ತ್ರೀಯ ಭಾಷೆಯೆಂಬ ವರ್ಗೀಕರಣದ ಬಗ್ಗೆ ಚಿಂತಿಸೋಣ. ಸ್ಥೂಲವಾಗಿ ಹೇಳುವುದಾದರೆ 'ಭಾಷೆಯೆನ್ನುವುದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ, ಸಹಕಾರಕ್ಕಾಗಿ ಬಳಸುವ ಧ್ವನಿ ಸಂಕೇತಗಳ ವ್ಯವಸ್ಥೆ' (ಡಾ|| ಎಂ.ಚಿದಾನಂದಮೂರ್ತಿಗಳ 'ಭಾಷಾ ವಿಜ್ಞಾನದ ಮೂಲ ತತ್ತ್ವಗಳು –ಕೃತಿಯ ಓದಿನಿಂದ ಉದ್ಧೃತ'). ಈ ಭಾಷೆಯನ್ನು ವೈಜ್ಞಾನಿಕವಾಗಿ ವರ್ಗೀಕರಿಸುವ ಪ್ರಯತ್ನಗಳು ನಡೆದಿವೆ. ಭಾಷಾ ವಿಜ್ಞಾನಿಗಳು ಭಾಷಾವಲಯವನ್ನು ಒಟ್ಟಾರೆಯಾಗಿ– ಭೌಗೋಳಿಕ, ಜನಾಂಗಿಕ, ರಾಚನಿಕ, ವಾಂಶಿಕ–ಹೀಗೂ ವರ್ಗೀಕರಿಸಿರುತ್ತಾರೆ. ಇಂತಹ ನೆಲೆಯಿಂದಲೇ ಕೆಲವು ಭಾಷೆಗಳಿಗೆ 'ದೇವಭಾಷೆ'ಯ ಪಟ್ಟಲಭ್ಯವಾಗುತ್ತದೆ. 'ಅನಾಗರಿಕ'ರೆಂದು ಮೂಲ ನಿವಾಸಿಗಳನ್ನು ವರ್ಗೀಕರಿಸಿ ಅವರ ಭಾಷೆಗಳನ್ನು

'ಆದಿಮ' 'ಪ್ರಾಕೃತ' ಎಂದು ಕರೆಯುತ್ತ ಬರಲಾಗಿದೆ. 'ಐರೋಪ್ಯ ನವೋದಯ' ಕಾಲದಲ್ಲಿ ಜಗತ್ತಿನ ಹಲವು ಖಂಡಾಂತರಗಳು ಮತ್ತೆ ಜಗತ್ತಿನ ಭೂಪಟದಲ್ಲಿ ಕಾಣಿಸಿಕೊಂಡವು. ಅಲ್ಲಿ ನೆಲೆಸಿದ ಐರೋಪ್ಯರಿಗೆ ಮೂಲ ನಿವಾಸಿಗಳು ಭಿನ್ನವಾಗಿ ಕಂಡರು. ಅಲ್ಲದೆ 'ಆದಿಮ'ರಾಗಿ 'ಪ್ರಾಕೃತ'ರಾಗಿ ಕಂಡರು. ಅನಾಗರಿಕರಾಗಿ ತೋರಿದರು. ಅವರ ಭಾಷೆಗಳೂ 'ಆದಿಮ'ವೆನಿಸಿದವು... ಪ್ರಾಕೃತ ಭಾಷೆಗಳ ಪರಿಕಲ್ಪನೆ ಒಂದು ತುದಿ. ದೇವಭಾಷೆಗಳದ್ದು ಇನ್ನೊಂದುತುದಿ. ಸಂಸ್ಕೃತವನ್ನು ಗೀರ್ವಾಣ ಭಾಷೆಯೆಂದು ದೇವಭಾಷೆಯೆಂದೂ ವಾದಿಸುವವರಿದ್ದಾರೆ. ಅದರಿಂದಾಗಿ ಭಾಷೆಗೆ ಪಾವಿತ್ರ್ಯ ಸಂದಿದೆಯೆಂದು ತಿಳಿಯುವವರಿದ್ದಾರೆ. ಕ್ರೈಸ್ತರು ಲ್ಯಾಟೀನನ್ನು, ಮುಸ್ಲಿಮರು ಅರೇಬಿಕ್ ಅನ್ನು, ಯಹೂದಿಗಳು ಹಿಬ್ರೂವನ್ನು ಧಾರ್ಮಿಕ ವಲಯದ ಉನ್ನತೀಕರಣ ಮತ್ತು ಪಾವಿತ್ರ್ಯವನ್ನು ಕಾಯ್ದುಕೊಳ್ಳಲು ಬಳಸುತ್ತಾರೆ. (ಡಾ॥ ಕೆ.ವಿ ನಾರಾಯಣ–ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ–'ಭಾಷೆ').

ಹೀಗೆ 'ದೇವಭಾಷೆ'ಯೆಂದು ಧಾರ್ಮಿಕ ಉನ್ನತೀಕರಣಕ್ಕೊಳಗಾದ ಭಾಷೆಗಳು ಮುಂದೆ ಜನಬಳಕೆಯಿಂದ ದೂರವಾದವು. ಕೇವಲ ಗ್ರಂಥಸ್ಥವಾದವು. "ಒಂದಾನೊಂದು ಕಾಲದಲ್ಲಿ ಜನರು ಆಡುವ ಭಾಷೆಯಾಗಿದ್ದು, ಕ್ರಮೇಣ ಬಳಕೆ ತಪ್ಪಿ ಕೇವಲ ಗ್ರಂಥಸ್ಥವಾಗಿರುವ ಭಾಷೆಗಳನ್ನು 'ಮೃತಭಾಷೆ'ಗಳೆಂದು (Dead language)ಕರೆಯುತ್ತಾರೆ. ಉದಾಹರಣೆಗೆ–ಸಂಸ್ಕೃತ ಮತ್ತು ಲ್ಯಾಟಿನ್. (ಡಾ॥ ಎಂ. ಚಿದಾನಂದಮೂರ್ತಿ–'ಭಾಷಾ ವಿಜ್ಞಾನದ ಮೂಲತತ್ತ್ವಗಳು')ಹೀಗೆ 'ಮೃತಭಾಷೆ'ಯೆಂದು ಸಂಸ್ಕೃತವನ್ನು ಕರೆಯತೊಡಗಿದಾಗ 'ಸಂಸ್ಕೃತವಲಯ'ಕ್ಕೆ ಕಿರಿಕಿರಿಯಾಯಿತೆಂದು ಕಾಣುತ್ತದೆ. ಧಾರ್ಮಿಕ ಉನ್ನತೀಕರಣದಲ್ಲಿ 'ದೇವಭಾಷೆ'ಯೆಂದು ಕರೆಸಿಕೊಂಡು ಅಥವಾ ಕರೆಸಿಕೊಳ್ಳುವಂತೆ ಮಾಡಲ್ಪಟ್ಟ ಭಾಷೆಯನ್ನು ಮುಂದೆ ಭಾಷಾ ವಿಜ್ಞಾನಿಗಳು 'ಮೃತಭಾಷೆ'ಎಂದಾಗ ವೈಜ್ಞಾನಿಕ ವರ್ಗೀಕರಣವನ್ನು 'ಧಾರ್ಮಿಕರು' ಹೇಗೆ ಒಪ್ಪಿಕೊಂಡಾರು? ಇದಕ್ಕಾಗಿ ಗೌರವಾನ್ವಿತ ನಾಮಧೇಯವೊಂದರ ಹುಡುಕಾಟ ಆರಂಭವಾದಂತೆ ಕಾಣುತ್ತದೆ. ನನ್ನ ತಿಳುವಳಿಕೆಯ ಇತಿಮಿತಿಯಲ್ಲಿ ಹೇಳುವುದಾದರೆ 'ಮೃತಭಾಷೆ'ಯ ಬದಲು 'ಶಾಸ್ತ್ರೀಯ ಭಾಷೆ'(Classical language) ಎಂಬ ಹೆಸರನ್ನು ಚಾಲ್ತಿಗೆ ತರಲಾಯಿತು. 'ಮೃತಭಾಷೆ'ಯೆಂಬ ವಾಸ್ತವವನ್ನು ಒಪ್ಪಲಾಗದ ಧಾರ್ಮಿಕ ಭಾವನೆಯ ಮನಃಸ್ಥಿತಿಯು 'ಶಾಸ್ತ್ರೀಯ ಭಾಷೆ'ಯೆಂಬ ಹೆಸರಿನಲ್ಲಿ 'ಹುಸಿ' ಗೌರವವನ್ನು ಪಡೆಯುವ ಪ್ರಯತ್ನ ಮಾಡಿತು. ದೇವಭಾಷೆ, ಮೃತಭಾಷೆ ಮತ್ತು ಶಾಸ್ತ್ರೀಯಭಾಷೆಗಳು ಒಂದೇ ಮೂಲಕ್ಕೆ ಕೊಟ್ಟ ಮೂರು ಹೆಸರುಗಳಾದವು.

ಜನರ ಜೀವಂತ ಭಾಷೆಯಾದ ಕನ್ನಡವು 'ಮೃತಭಾಷೆ'ಯ ಬದಲು ಶಾಸ್ತ್ರೀಯಭಾಷೆ ಎಂದು ನಾಮಾಂಕಿತವಾದ ಸ್ಥಾನಮಾನವನ್ನು ಪಡೆಯಲು ಹವಣಿಸುವುದು ಸಮಕಾಲೀನ ಸಂದರ್ಭದ ಒಂದು ವಿಪರ್ಯಾಸ.

'ದೇವಭಾಷೆ'ಯೆಂಬ ಪಟ್ಟವನ್ನಂತೂ ಕನ್ನಡಕ್ಕೆ ಕೊಡುವುದಿಲ್ಲ. ಅದು ಸಂಸ್ಕೃತಕ್ಕೆ ಮೀಸಲು. 'ದೇವಭಾಷೆ' ಮೃತಭಾಷೆಯಾದಾಗ ಮೂಡಿದ ಹೊಸ ಹೆಸರುನ್ನು ಪಡೆಯಲು ಕನ್ನಡಕ್ಕೆ ಯಾಕಿಷ್ಟು ಆಕಾಂಕ್ಷೆ? ಇದು ಎಲ್ಲ ಕನ್ನಡಿಗರ ಆಕಾಂಕ್ಷೆಯೇ? ಕಡೇಪಕ್ಷ ಕನ್ನಡಪರ ಬೌದ್ಧಿಕವಲಯವು ಸಂಪೂರ್ಣವಾಗಿ ಈ ಆಕಾಂಕ್ಷೆಯನ್ನು ಒಪ್ಪಿದೆಯೆ? ಇಂತಹ ವಿಚಾರಗಳಿಗೆ ಕನ್ನಡ ಪರ ಮುಂಚೂಣಿ ಬುದ್ಧಿವಲಯದಲ್ಲಿ ಅವಕಾಶವಿಲ್ಲ. ಯಾಕೆಂದರೆ ಈ ಬಗ್ಗೆ ವ್ಯವಸ್ಥಿತ ಚರ್ಚೆಯೊಂದು ಸಾಧ್ಯವಾಗಿಲ್ಲ. ಬಹಳಷ್ಟು ಸಾರಿ ಕನ್ನಡ ಪರ ಬುದ್ಧಿವಲಯವೆಂದು ಪ್ರತಿಷ್ಠಿತರಾದವರು ಚರ್ಚೆಯ ಬದಲು ತೀರ್ಪು ನೀಡಿ ಹಕ್ಕೊತ್ತಾಯ ಆರಂಭಿಸುವುದು ಇಂದಿನ ವಾಡಿಕೆಯಾಗಿದೆ. ಇನ್ನು ಸರ್ಕಾರಗಳು ಇದನ್ನೇ ಜನಾಭಿಪ್ರಾಯವೆಂದು ಭಾವಿಸಿ ಭರವಸೆ ನೀಡುತ್ತವೆ. ಚರ್ಚೆಗೆ ಎಳೆಯುವ ಶಕ್ತಿ ಸಾಮರ್ಥ್ಯವಿರುವ ಕೆಲವರು ತಮಗೇಕೆ ಎಂದು ಮೌನ ವಹಿಸುತ್ತಾರೆ. 'ಶಾಸ್ತ್ರೀಯ ಭಾಷೆ'ಯ ವಿಷಯವೂ ಇದಕ್ಕೆ ಹೊರತಾಗಿಲ್ಲ.

ಹಾಗಾದರೆ ಕನ್ನಡಕ್ಕೆ ಈ ಸ್ಥಾನಮಾನವನ್ನು ಕೇಳುವುದು ತಪ್ಪೆ? ನಾನು ಇದು ಸಂಪೂರ್ಣ ತಪ್ಪೆಂದು ಹೇಳುವುದಿಲ್ಲ. ಆದರೆ ತಮಿಳರು ಕೇಳುವವರೆಗೆ ಈ ಬಗ್ಗೆ ತಿಳುವಳಿಕೆಯೇ ಇಲ್ಲದಂತೆ ನಾವು ಇದ್ದೆವಲ್ಲ ಅದೇ ಸರಿಯಾದ ವಾಸ್ತವ. ಅಂದರೆ ಶಾಸ್ತ್ರೀಯ ಭಾಷೆಯಾಗುವುದರಲ್ಲೇ ಕನ್ನಡದ ಉದ್ಧಾರವಿದೆಯೆಂದು ಇಲ್ಲಿನ ಜನರು ಇಲ್ಲಿಯವರೆಗೆ ಭಾವಿಸಿರಲಿಲ್ಲವೆಂಬ ವಾಸ್ತವ ನನಗಿಲ್ಲಿ ಮುಖ್ಯ.

ಇಷ್ಟಕ್ಕೂ ತಮಿಳರು 'ಶಾಸ್ತ್ರೀಯ ಭಾಷೆ'ಯ ಸ್ಥಾನಮಾನ ಕೇಳುವುದರ ಹಿಂದೆ ಇರುವುದು ಪ್ರತಿಷ್ಠೆ ಮತ್ತು ಲಾಭಾಪೇಕ್ಷೆ. ಈ ಸ್ಥಾನಮಾನ ಲಭ್ಯವಾದರೆ ತಮಿಳುಭಾಷೆಗೆ (ಹುಸಿ) ಪ್ರತಿಷ್ಠೆ ಬರುತ್ತದೆ ಮತ್ತು ಕೇಂದ್ರ ಸರ್ಕಾರದಿಂದ ಈ ಭಾಷೆಗೆ ಕೆಲವು ವಿಶೇಷ ಸೌಲಭ್ಯಗಳು ದೊರೆಯುತ್ತವೆ. ವಿವಿಧ ಕಡೆ ತಮಿಳು ಅಧ್ಯಯನ ಪೀಠಗಳ ಸ್ಥಾಪನೆ. ಆರ್ಥಿಕ ಅನುದಾನ ಇತ್ಯಾದಿ. ಈ ಸೌಲಭ್ಯಗಳ ದೃಷ್ಟಿಯಿಂದ ಕನ್ನಡಕ್ಕೂ 'ಶಾಸ್ತ್ರೀಯ ಭಾಷೆ'ಯ ಸ್ಥಾನಮಾನ ಸಿಗುವುದಾದರೆ ಸಂತೋಷ. ಆದರೆ ನಾವು ಕೇವಲ ಇಂತಹ ಹುಸಿ ಗೌರವ ಮತ್ತು ಆಂಶಿಕ ಆರ್ಥಿಕ ಅನುದಾನಗಳಲ್ಲೇ ಅಂತ್ಯವಾಗಬೇಕೆ? ಈ ಪ್ರಶ್ನೆಯನ್ನು ಕನ್ನಡಿಗರು ಕೇಳಿಕೊಳ್ಳಬೇಕಾಗಿದೆ.

'ಶಾಸ್ತ್ರೀಯ ಭಾಷೆ'ಯೆಂಬ ಕಲ್ಪನೆಯು ಸಾಮಾಜಿಕ-ರಾಜಕೀಯ ಸಂದರ್ಭದ ಉತ್ಪನ್ನ. ಇದರಲ್ಲಿ ಹುಸಿ ಶ್ರೇಷ್ಠತೆ ಮತ್ತು ಸೌಲಭ್ಯಗಳ ಅಂಶವೂ ಸೇರಿದೆ. ರಾಜಕೀಯ ಅಂಶವೂ ಸೇರಿದೆ. ಭಾಷಾತಜ್ಞರ ಬದಲು ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನಿರ್ಧರಿಸುವುದು ನೌಕರಶಾಹಿ ಮತ್ತು ರಾಜಕೀಯಶಾಹಿ! ಇದಕ್ಕಾಗಿ ನಮ್ಮ ಹೋರಾಟ. ಭಾಷಾ ಹೋರಾಟಗಳು ಪಡೆಯುತ್ತಿರುವ ಆಯಾಮಕ್ಕೆ ಇದೊಂದು ಉದಾಹರಣೆಯಾಗಿದೆ. ಆದರೆ ನಾವು-ಕನ್ನಡಿಗರು-ಇದನ್ನು ಮೀರಿದ

ತಿಳುವಳಿಕೆಯನ್ನು ಆಧರಿಸಿದ ಹೋರಾಟಗಳನ್ನು ಕಟ್ಟಬೇಕಾಗಿದೆ. 'ಭಾಷಾ ಸಮಾನತೆ'-ಇಂತಹ ಹೋರಾಟಗಳಲ್ಲಿ ಒಂದು. ಈ ದೇಶದ ಭಾಷೆಗಳೆಲ್ಲ ಸಮಾನವೆಂಬುದು ರಾಷ್ಟ್ರೀಯ ನೀತಿಯಾಗಬೇಕು. ಆಗ ರಾಜಕೀಯ ಒತ್ತಡಗಳಿಂದ ಭಾಷೆಯ ಸ್ಥಾನ ಮಾನವನ್ನು ನಿರ್ಧರಿಸುವ ಚದುರಂಗದಾಟಕ್ಕೆ ಅವಕಾಶವಿರುವುದಿಲ್ಲ. ಎಲ್ಲ ಜನರ ಭಾಷೆಗಳನ್ನೂ ಸಮಾನವೆಂದು ಪರಿಗಣಿಸಿ, ಸಮಾನ ಸ್ಥಾನವಾನ ನೀಡಿ, ಸಂಪನ್ಮೂಲಗಳನ್ನು ಒದಗಿಸುವ ರಾಷ್ಟ್ರೀಯ ನೀತಿಗಾಗಿ ಕರ್ನಾಟಕವು ಹೋರಾಟದ ನಾಂದಿ ಹಾಡಬೇಕು. ಹೀಗೆ ಮಾಡಿದರೆ ಕನ್ನಡ-ಕರ್ನಾಟಕ ವಿಶಿಷ್ಟವಾಗಿ ಕಾಣಿಸುತ್ತದೆ. ವಾಸ್ತವಕ್ಕೆ ಉಸಿರಾಗುತ್ತದೆ. 'ನಿರಂಕುಶಮತಿ'ಯಾಗುತ್ತದೆ. ತಮಿಳು ಬೇಡಿಕೆಗಳ ನೆರಳಾಗುವ ಬದಲು ಸ್ವತಂತ್ರ ಹೋರಾಟಕ್ಕೆ ನಾಂದಿಯಾದ ಹೆಸರು ಕರ್ನಾಟಕದ್ದಾಗುತ್ತದೆ.

ಇಂತಹ ದೊಡ್ಡ ಹೋರಾಟ ಹುಟ್ಟುವ ಮುಂಚೆ ಕೆಲವು ಅನುಕೂಲಗಳ ಕಾರಣಕ್ಕಾಗಿಯೇ ಕನ್ನಡಕ್ಕೂ 'ಶಾಸ್ತ್ರೀಯ ಭಾಷೆ'ಯ ಸ್ಥಾನ ಸಿಗಲಿ ಎಂದು ಆಶಿಸಬಹುದಾಗಿದೆ. ಆದರೆ ಅದೇ ಸಂದರ್ಭದಲ್ಲಿ ಹುಸಿ ಪ್ರತಿಷ್ಠೆಗಳಿಂದ ಹೊರಬರುವ ಹೋರಾಟದ ವಾಸ್ತವ ನಮ್ಮದಾಗಬೇಕಾಗಿದೆ. ಒಟ್ಟಿನಲ್ಲಿ ಕನ್ನಡಕ್ಕೆ ಒಳ್ಳೆಯದಾಗಲಿ.

(ಸಾಭಾರ : ಮಯೂರ)

ಸ್ನೇಹ

ಕೆಲವರು ಹೇಳುವರು
ಸ್ನೇಹಕ್ಕೆ ಬೆಲೆ ಕಟ್ಟಲಾಗದೆಂದು
ಆದರೆ ನಾ ಹೇಳುವೆ, ಬೆಲೆ
ಕಟ್ಟಲಾಗದಷ್ಟು ಅಗ್ಗವಲ್ಲ ಈ ಸ್ನೇಹ.

ಒಲವು

ಸುಖ ಸಂಸಾರಕೆ
ಪ್ರೀತಿ ಒಲವು
ಸಿರಿ ಸಂಪದಕ್ಕಿಂತ ಮಿಗಿಲು

-ಶ್ರೀ ನೀಲಕಠಪ್ಪ. ಹೆಚ್. ತಟ್ಟಿ

ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರ ಗಮನಕ್ಕಾಗಿ ಕರಕನಹಳ್ಳಿ ಗ್ರಾಮಸ್ಥರ ಮೊರೆ

-ಪುಷ್ಪಾ ಸುರೇಂದ್ರ, ಮೈಸೂರು.

ದೇಶವು ಸುನಾಮಿ ದುರಂತದಿಂದ ಪೀಡಿತವಾಗಿದೆ. ಇಡೀ ದೇಶವೇ ಪರಿಹಾರ ಕಾರ್ಯದಲ್ಲಿ ತೊಡಗಿದೆ. ಇದು ಸರಿಯಾದುದೆ. ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರು ಸುನಾಮಿ ಪೀಡಿತರಿಗಾಗಿ ನಿಧಿ ಸಂಗ್ರಹಿಸಲು ಪಾದಯಾತ್ರೆ ಕೈಗೊಳ್ಳುತ್ತಿದ್ದಾರೆ. ಇದೂ ಸ್ವಾಗತಾರ್ಹ ಸಂಗತಿ. ಅವರ ಈ ಪ್ರಯತ್ನಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕು. ಆದರೆ ತಮ್ಮ ಕ್ಷೇತ್ರದಲ್ಲಿಯೆ ಇರುವ ಹಳ್ಳಿಯೊಂದರಲ್ಲಿ ಅನಾಹುತಗಳು ಎದ್ದೇಳುತ್ತಿವೆಯೆಂಬುದರ ಬಗ್ಗೆ ಸಿದ್ಧರಾಮಯ್ಯನವರಿಗೆ ಗೊತ್ತಿದೆಯೆ? ಕರಕನಹಳ್ಳಿಯು ಸಿದ್ಧರಾಮಯ್ಯನವರ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಖಾಸಗಿ ವಲಯದ ವಾಣಿಜ್ಯ ಹಿತಾಸಕ್ತಿಯನ್ನು ಹೊಂದಿರುವ ಜನರು ಆ ಹಳ್ಳಿಯ ಜಲಸಂಪನ್ಮೂಲವನ್ನು ದೋಚುತ್ತಿದ್ದಾರೆ. ವಾಣಿಜ್ಯೋದ್ಯಮದಲ್ಲಿ ತೊಡಗಿರುವ ಹೋಟೆಲ್ ಮಾಲೀಕರು ರೈತರೊಂದಿಗೆ ಒಪ್ಪಂದ ಮಾಡಿಕೊಂಡು ಆ ರೈತರ ಖಾಸಗಿ ಬೋರ್‌ವೆಲ್‌ಗಳಿಂದ ನೀರನ್ನೆಳೆದು ಹೋಟೆಲುಗಳಿಗೆ ಸರಬರಾಜು ಮಾಡುತ್ತಿದ್ದಾರೆ. ವಾಣಿಜ್ಯ ಹಿತಾಸಕ್ತಿಯನ್ನು ಹೊಂದಿರುವಂಥವರು ರೈತರಿಂದ ಅರ್ಧ ಅಥವಾ ಒಂದು ಕುಂಟೆ ಜಮೀನನ್ನು ಖರೀದಿಸುತ್ತಾರೆ. ನಂತರ ಬೋರ್‌ವೆಲ್ ಹಾಕಿ ನೀರನ್ನು ಎಳೆಯುತ್ತಾರೆ. ಸಾರ್ವಜನಿಕ ಭೂಮಿ ಮತ್ತು ಮುಖ್ಯ ಮಾರ್ಗದಲ್ಲಿ ಚರಂಡಿಗಳನ್ನು. ಈ ಎಲ್ಲ ವ್ಯವಹಾರಗಳು ಯಲವಾಲ್ ಪಂಚಾಯಿತಿ ಮತ್ತು ಪೌರ ಆಡಳಿತದ ಅನುಮತಿ ಇಲ್ಲದೆ ನಡೆದಿರಲು ಸಾಧ್ಯವಿಲ್ಲ. ಈ ಪ್ರಕಾರದಲ್ಲಿ ಭೂಜಲವು ಉಪಯೊಗಿಸಲ್ಪಟ್ಟಿದ್ದೇ ಆದರೆ ಅದು ಕರಕನಹಳ್ಳಿಗೆ ಅಗತ್ಯವಾದ ಕುಡಿಯುವ ನೀರಿನ ಲಭ್ಯತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಲ್ಲದೆ ಆ ಪ್ರದೇಶದಲ್ಲಿಯ ಬೋರ್‌ವೆಲ್‌ಗಳ ನೀರಿನ ಲಭ್ಯತೆಯ ಮೇಲೂ ದುಷ್ಪರಿಣಾಮ ಉಂಟಾಗುತ್ತದೆ. ಬೇಸಿಗೆ ಬಂದರೆ ಗ್ರಾಮಸ್ಥರಿಗೆ ಬಹಳ ತೊಂದರೆಗಳಾಗುತ್ತವೆ. ಹಾಗೆಯೇ ಬೋರ್‌ವೆಲ್‌ಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದ ರೈತರು ಸಹ ಬಹಳ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಇಂಥ ದುಃಸ್ಥಿತಿಗೆ ಒಳಗಾಗಿರುವ ಪ್ರದೇಶದ ರೈತರಲ್ಲಿ ನಾನು ಮತ್ತು ನನ್ನ ಪತಿಯೂ ಸೇರಿದ್ದೇವೆ. ಕಳೆದ ಏಳು ವರ್ಷಗಳಲ್ಲಿ ನಾವು ಮಳೆಕುಯ್ಲಿನ ಯೋಜನೆಯಲ್ಲಿ ಬಹಳಷ್ಟು ಹಣವನ್ನು ತೊಡಗಿಸಿದ್ದೇವೆ. ಅಲ್ಲದೆ ನೀರಿನ ಹೊಂಡಗಳನ್ನು ತೋಡುವುದಕ್ಕಾಗಿ, ಹನಿ ನೀರಾವರಿಯನ್ನು ಅಳವಡಿಸುವುದಕ್ಕಾಗಿ ಮತ್ತು ಕೊಚ್ಚೆನೀರಿನ ಶುದ್ಧೀಕರಣಕ್ಕಾಗಿ ಬಹಳಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ರೈತರ ಶೋಷಣೆ ಮಾಡುವುದರಲ್ಲಿ ಮತ್ತು ನಮ್ಮಂಥ

ನೀರು ಉಳಿತಾಯದ ರೈತರನ್ನು ಶೋಷಿಸುವುದರಲ್ಲಿ ಸರ್ಕಾರವು ಭಾಗಿಯಾಗಿದೆಯೆ ಎಂಬ ಸಂದೇಹ ನಮಗುಂಟಾಗುತ್ತಿದೆ. ಖಾಸಗಿ ವಾಣಿಜ್ಯೋದ್ಯಮಿಗಳು ತಮ್ಮ ಸ್ವಾರ್ಥಕ್ಕಾಗಿ ನೀರನ್ನು ದೋಚುವುದಾದರೆ ಹಳ್ಳಿಯಲ್ಲಿ ಬೋರ್‌ವೆಲ್‌ಗಳನ್ನು ಹಾಕುವುದರ ಹಿಂದಿರುವ ಉದ್ದೇಶವೇನು? ಬೋರ್‌ವೆಲ್‌ಗಳನ್ನು ರಕ್ಷಿಸುವುದಕ್ಕಿಂತ ಅವುಗಳನ್ನು ತೋಡುವುದು ಸರ್ಕಾರಕ್ಕೆ ಹೆಚ್ಚು ಸುಲಭವಾಗಿದೆಯೆ? ಕರಕನಹಳ್ಳಿ ಕಳೆದ ಮೂರು ವರ್ಷಗಳಿಂದ ಗಂಭೀರವಾದ ನೀರಿನ ಬರವನ್ನು ಅನುಭವಿಸುತ್ತಿದೆ. ಮಳೆಯ ಕೊರತೆಯಿಂದಾಗಿ ಅನೇಕ ಗ್ರಾಮಸ್ಥರು ವ್ಯವಸಾಯವನ್ನೇ ತ್ಯಜಿಸಿದ್ದಾರೆ. ನೀರನ್ನು ಅತ್ಯಂತ ಮಿತವಾಗಿ ಉಪಯೋಗಿಸುತ್ತಿರುವಂಥ ನಮ್ಮಂಥ ತೋಟಗಾರರು ಮಾತ್ರ ಹೇಗೋ ಬದುಕುಳಿದಿದ್ದೇವೆ. ಜೀವನ ನಿರ್ವಹಣೆಗಾಗಿ ಇನ್ನಿತರ ಮಾರ್ಗಗಳನ್ನು ನಾವು ಹುಡುಕಬೇಕಾಗಿದೆ. ನಮ್ಮಂಥ ಶಿಕ್ಷಿತ ರೈತರು ನಮ್ಮ ಆರ್ಥಿಕ ಸಂಕಷ್ಟಗಳನ್ನು ಹೇಗೋ ಎದುರಿಸಬಹುದು. ಯಲವಾಲ್ ಪಂಚಾಯತಿ ನೀರಿನ ಉಳಿತಾಯಕ್ಕೆ ಸಂಬಂಧಿಸಿದಂತೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಅಲ್ಲಿಯ ನೀರನ್ನು ದೋಚುತ್ತಿರುವ ಹೋಟೆಲ್ ಮಾಲೀಕನೂ ಸಹ ಆ ಕುರಿತು ಆಲೋಚಿಸಿಲ್ಲ. ಈ ಸಂಬಂಧವಾಗಿ ನೀರನ್ನು ಮಾರುವ ರೈತರಿಗೆ ಮತ್ತು ನೀರು ಖರೀದಿದಾರರಿಗೆ ನಾವು ಹೇಳುವ ಮಾತುಗಳು ಕಿವಿಯ ಮೇಲೆ ಬೀಳುವುದೇ ಇಲ್ಲ. ಕೆಲವು ಗ್ರಾಮಸ್ಥರು ಈ ಸಂಬಂಧವಾಗಿ ಜಿಲ್ಲಾಧಿಕಾರಿಯವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ನಾವು ಸಹ ಕೆ.ಪಿ.ಟಿ.ಸಿ.ಎಲ್.ಗೆ ಪತ್ರವನ್ನು ಬರೆದು ವಾಣಿಜ್ಯೋದ್ದೇಶಕ್ಕಾಗಿ ನೀರನ್ನು ಪೂರೈಸುವ ಪಂಪಿಗೆ ಉಚಿತವಾಗಿ ವಿದ್ಯುತ್ ಸಂಪರ್ಕವನ್ನು ಕೊಡುವುದು ಕಾನೂನು ಬಾಹಿರವೆಂದು ತಿಳಿಸಿದ್ದೇವೆ. ಒಂದು ವೇಳೆ ಹಾಗೇನಾದರೂ ವಿದ್ಯುತ್ ಸಂಪರ್ಕ ಕೊಟ್ಟಲ್ಲಿ ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯವನ್ನು ಹೂಡುವುದಾಗಿಯೂ ಹೆದರಿಸಿದ್ದೇವೆ. ಈಗ ಇದಾದ ಮೇಲೆ ವಿದ್ಯುತ್ ಸಂಪರ್ಕ ಕೊಡುವುದನ್ನು ಮುಂದಕ್ಕೆ ಹಾಕಿದ್ದಾರೆ. ಆದರೆ ಇಷ್ಟರಲ್ಲಿಯೆ ಕೆ.ಪಿ.ಟಿ.ಸಿ.ಎಲ್. ವಿದ್ಯುತ್ ಸಂಪರ್ಕವನ್ನು ಕೊಡಲು ಉದ್ದೇಶಿಸಿದೆ ಎಂದು ಗೊತ್ತಾಗಿದೆ. ಅಂಥ ಸಂರ್ಭದಲ್ಲಿ ಕೆ.ಪಿ.ಟಿ.ಸಿ.ಎಲ್. ಯಾವ ಮೊಬಲಗನ್ನು ವಿದ್ಯುತ್ ಉಪಯೋಗಕ್ಕಾಗಿ ವಸೂಲಿ ಮಾಡುವುದು?

ಕರ್ನಾಟಕ ವಿದ್ಯುತ್ ವಿತರಣಾ ಪ್ರಾಧಿಕಾರವು ಅಂಥ ಘಟನೆಗಳನ್ನು ಯಾವ ದೃಷ್ಟಿಯಿಂದ ನೋಡುವುದು? ಇಲ್ಲಿ ಒಂದು ವಿಷಯ ಸ್ಪಷ್ಟವಾಗಿದೆ. ಹೋಟೆಲ್ ಮಾಲೀಕನು ಡಿಸೆಲ್‌ನ ಖರೀದಿಗಾಗುವ ಹಣವನ್ನು ಉಳಿಸಲು ಬಯಸುತ್ತಾನೆ. ಏನೇ ಆಗಲಿ ದುರ್ಲಭವಾಗುತ್ತಿರುವ ನೀರಿನ ಮೂಲಗಳನ್ನು ಉಳಿಸಬೇಕಾದುದು ಸರ್ಕಾರದ ಕರ್ತವ್ಯ. ಹಾಗೆ ಉಳಿಸಲಾದ ನೀರನ್ನು ಸಾರ್ವಜನಿಕರಿಗೆ ಮುಖ್ಯವಾಗಿ ಕರಕನಹಳ್ಳಿ, ಈರಪ್ಪನ ಕೊಪ್ಪಲು ಮುಂತಾದ ಗ್ರಾಮಗಳ ಜನರಿಗೆ ದೊರೆಯುವಂತೆ ನೋಡಿಕೊಳ್ಳಬೇಕು. ಆದರೆ ಖಾಸಗಿ ಜನರ ದುರಾಸೆಯ ಕೈ ಮೇಲಾಗುತ್ತದೆಯೆ ಹೊರತು ಸಾರ್ವಜನಿಕರ ಹಿತವಲ್ಲ.

ಸ್ತ್ರೀ ಸ್ವಾತಂತ್ರ್ಯ ಹೋರಾಟದ ಹರಕಾರಿಣಿ –ಮೀರಾಬಾಯಿ

–ಯೋಗೇಂದ್ರನಾರಾಯಣ್ ಮತ್ತು ಎಸ್.ಎನ್ ಸಾಹು.

ಮಾನವ ಇತಿಹಾಸದಲ್ಲಿ ಸ್ತ್ರೀಯನ್ನು ಸನ್ಯಾಸಿನಿಯೆಂದು ಸ್ವೀಕರಿಸಿದ್ದು ಮತ್ತು ಮೆಚ್ಚಿದ್ದು ಬಹಳ ಅಪರೂಪದ ಸಂಗತಿ. ಸಾವಿರಾರು ವರ್ಷಗಳಿಂದ ಸ್ತ್ರೀಯರನ್ನು ಕೆಳಹಂತಕ್ಕೆ ತಳ್ಳಿ, ಅವರ ನ್ಯಾಯ ಸಮ್ಮತ ಹಕ್ಕುಗಳನ್ನು ನಿರಾಕರಿಸಿ, ಸಮಾಜದಲ್ಲಿ ಅವರಿಗೆ ಸಲ್ಲಬೇಕಾದ ಸ್ಥಾನವನ್ನು ಅಲ್ಲಗಳೆದಿರುವಂಥ ಸಂದರ್ಭದಲ್ಲಿ ಈ ಸಂಗತಿ ಅಸಾಧಾರಣವಾದುದು ಮತ್ತು ಅದ್ವಿತೀಯವಾದುದೆಂದು ಹೇಳಬಹುದು. ಸ್ತ್ರೀಯರಿಗೆ ಜೀವನದಲ್ಲಿ ದೊರೆಯಬಹುದಾದ ಅವಕಾಶಗಳೆಲ್ಲವೂ ಬೇಧ-ಭಾವಗಳಿಂದಲೂ ಹಾಗೂ ಅಡತಡೆಗಳಿಂದಲೂ ತುಂಬಿದಂಥ ಸಂದರ್ಭದಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಕ್ಕೆ ಅವರ ಪ್ರವೇಶವಂತೂ ಪೂರ್ಣತಃ ನಿರಾಕರಿಸಲ್ಪಟ್ಟಿತ್ತು. ಆ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಲು ಸ್ತ್ರೀಯರು ಪ್ರಯತ್ನಿಸಿದ್ದೇ ಆದರೆ ಅವುಗಳ ನಿರಾಕರಣೆಯಾಗುತ್ತಿತ್ತು; ಅವಹೇಳನಕ್ಕೆ ಒಳಗಾಗುತ್ತಿತ್ತು ಮತ್ತು ಖಂಡನೆಗೆ ತುತ್ತಾಗುತ್ತಿತ್ತು. ಅಷ್ಟೆಅಲ್ಲ, ಶಿಕ್ಷೆಯನ್ನೂ ಸಹ ಕೊಡಲಾಗುತ್ತಿತ್ತು. ಸಮಾಜದ ಈ ಎಲ್ಲ ಬಗೆಯ ಅಡಚಣೆಗಳ ತರುವಾಯವೂ ಮತ್ತು ಅವಳದೇ ಸ್ವಂತ ರಾಜವಂಶದ ಬಿಗಿ ಕಟ್ಟಳೆಗಳ ತರುವಾಯವೂ ಸನ್ಯಾಸಿನಿಯಾಗಿ ಮೀರಾಬಾಯಿಯ ಆಗಮನವು ಮಧ್ಯಕಾಲೀನ ಭಾರತದ ಮತ್ತು ಇಡೀ ವಿಶ್ವದ ಒಂದು ಹೊಸ ಪರಂಪರೆಯ ನಾಂದಿಯೆಂದೇ ಹೇಳಬಹುದು. ಕೃಷ್ಣನ ಬಗ್ಗೆ ಇದ್ದ ಪವಿತ್ರವಾದ ಮತ್ತು ಸಹಜವಾದ ಭಕ್ತಿ, ಆಧ್ಯಾತ್ಮಿಕ ತುಡಿತ ಮೀರಾಬಾಯಿಯ ಜೀವನ ಹಾಗೂ ಕೃತಿಗಳ ಕೇಂದ್ರಬಿಂದುಗಳಾಗಿ ಉಳಿದವು. ಯಾರ ಬಗ್ಗೆಯೂ ದ್ವೇಷ ಅಥವಾ ಅಸೂಯೆ ಇಲ್ಲದ ಅವಳ ಜೀವನವು ಸದಾಕಾಲವೂ ಬಹಳಷ್ಟು ಪ್ರೀತಿ, ಕರುಣೆ ಮತ್ತು ಜ್ಞಾನದಿಂದ ತುಂಬಿ ಹರಿಯುವ ಪ್ರಕಾಶಮಾನವಾದ ತೊರೆಯ ಒಂದು ಉದಾಹರಣೆಯಾಯಿತು. ಇದೆಲ್ಲವೂ ಯಾರು ತನಗೆ ಶಿಕ್ಷೆ ಕೊಟ್ಟರೋ, ಕಷ್ಟ ಕೊಟ್ಟರೋ ಅಂಥವರ ಬಗ್ಗೆಯೇ ಇತ್ತು. ಬೇರೆಯವರು ಕೊಟ್ಟ ಎಲ್ಲ ಕಷ್ಟಗಳನ್ನು ಅವಳು ಸಹನೆಯಿಂದ ಹಾಗೂ ಅದ್ಭುತವಾದ ಅನುದ್ವಿಗ್ನತೆಯಿಂದ ಸಹಿಸಿದಳು. ಬಹುಮುಖ ಭವ್ಯ ವ್ಯಕ್ತಿತ್ವದ ಕಾರಣದಿಂದಾಗಿ ದೇವತಾ ಸದೃಶ ವ್ಯಕ್ತಿಯ ಸ್ಥಾನದಲ್ಲಿರಿಸಿ ಅವಳನ್ನು ಗೌರವಿಸಲಾಗಿದೆ. ತಲೆ ತಲೆಮಾರಿನ ಜನರು ಮಧ್ಯಕಾಲೀನ ಭಾರತದ ಮೊಟ್ಟ ಮೊದಲನೆಯ ಕ್ರಾಂತಿಕಾರಿ ಸ್ತ್ರೀ, ಸನ್ಯಾಸಿನಿ, ಕವಿಯತ್ರಿ, ಶ್ರೀಕೃಷ್ಣನ ಭಕ್ತೆ ಇತ್ಯಾದಿಯಾಗಿ ಅವಳ ಪಾತ್ರಗಳಿಂದಾಗಿ ಮೋಹಿತಗೊಂಡಿದ್ದಾರೆ.

ಭಾರತೀಯ ಕಾವ್ಯ ಸಮಿತಿಯು ಮೀರಾಬಾಯಿಯನ್ನು ಕುರಿತು ಒಂದು ವಿಚಾರ ಸಂಕಿರಣವನ್ನು ಏರ್ಪಡಿಸುತ್ತಿದೆಯೆಂಬುದು ಗಮನಿಸಬೇಕಾದ ಸಂಗತಿ. ಮೀರಾಬಾಯಿಯ ಜೀವನ ಮತ್ತು ಕೃತಿಗಳು ಮಾನವ ಜನಾಂಗವನ್ನು ಮಂತ್ರಮುಗ್ಧವನ್ನಾಗಿ ಮಾಡಿವೆ. "ಮೀರಾ ಇಂದು ಪ್ರಸ್ತುತವೆ?" ಎಂಬ ಪ್ರಶ್ನೆಯನ್ನು ಎತ್ತುವುದರ ಮೂಲಕ ನಮ್ಮ ಸಮಕಾಲೀನತೆಗೆ ಮೀರಾಬಾಯಿಯ ಪ್ರಸ್ತುತತೆಯನ್ನು ಏಕೆ ಚರ್ಚಿಸಬೇಕೆಂಬ ಪ್ರಶ್ನೆಯೂ ಹುಟ್ಟುತ್ತದೆ. ಮೀರಾಬಾಯಿ ಪ್ರಚಾರ ಮಾಡಿದ ಪ್ರೇಮ ಮತ್ತು ಕರುಣೆಯ ಸಂದೇಶ ತನ್ನ ಚೈತನ್ಯವನ್ನು ಕಳೆದುಕೊಂಡಿದೆಯೇನೋ ಎಂಬ ಅನಿಸಿಕೆ ಉಂಟಾಗುತ್ತದೆ. ಇಪ್ಪತ್ತೊಂದನೆ ಶತಮಾನದಲ್ಲಿ ಮೀರಾಬಾಯಿಯನ್ನು ಪುನಃ ಶೋಧಿಸುವ ಮತ್ತು ಭೌತಿಕ ಸುಖದ ಸತತ ಹುಡುಕಾಟದಲ್ಲಿ ಬಹಳ ಹೆಚ್ಚುಹೆಚ್ಚಾಗಿ ತೊಡಗಿರುವ ನಾವು ಮೀರಾಬಾಯಿಯ ಮಹತ್ವ ನಮ್ಮ ಕಾಲದಲ್ಲಿ ಎಷ್ಟಿದೆಯೆಂಬುದನ್ನು ತಿಳಿಯಲು ನಾವೇಕೆ ಪ್ರಯತ್ನಿಸಬೇಕು?

ನಮ್ಮ ಮೊದಲ ಪ್ರಧಾನಿ ಜವಹರಲಾಲ್ ನೆಹರು ಇತಿಹಾಸವೆಂಬುದು ಜೀವಂತ ಪ್ರಕ್ರಿಯೆ ಎಂದು ವರ್ಣಿಸಿದ್ದಾರೆ. ಭೂತಕಾಲವೆಂಬುದು ಎಷ್ಟೇ ದೂರವಿದ್ದರೂ ಅದರ ಪ್ರಭಾವ ನಮ್ಮ ಕಾಲದ ಕ್ರಿಯೆಗಳ ಮೇಲೆ ಇದ್ದೇ ಇರುತ್ತದೆ. ಸುಪ್ರಸಿಧ್ಧ ಇತಿಹಾಸಕಾರ ಮತ್ತು 'ಇತಿಹಾಸವೆಂದರೇನು' ಎಂಬ ಸುಪ್ರಸಿದ್ದ ಪುಸ್ತಕದ ಲೇಖಕನಾದ ಇ.ಎಚ್ ಕಾರ್ ಪ್ರಕಾರ ಪ್ರತಿಯೊಂದು ಇತಿಹಾಸವೂ ಸಮಕಾಲೀನ ಇತಿಹಾಸವೆ ಆಗಿರುತ್ತದೆ. ಈ ಮಾನದಂಡದಿಂದ ತೀರ್ಮಾನಿಸುವುದಾದರೆ ಮಧ್ಯಕಾಲೀನ ಭಾರತ ಇತಿಹಾಸವನ್ನು ನಮ್ಮ ಸಮಕಾಲೀನ ಅವಧಿಯ ದೃಷ್ಟಿಯಿಂದ ಅರಿತುಕೊಳ್ಳಬಹುದು. ನಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬಹುದು. ಮಹಾತ್ಮಾಗಾಂಧೀಯಂಥ ಹಿರಿಯ ವ್ಯಕ್ತಿ ಮೀರಾಬಾಯಿಯ ಪ್ರಸ್ತುತತೆಯನ್ನು ತೀವ್ರವಾಗಿ ಅರ್ಥಮಾಡಿಕೊಂಡಿದ್ದರು. ಆ ಪ್ರಸ್ತುತತೆ ನಮ್ಮ ದೇಶವು ವಿದೇಶಿಯರಿಂದ ಕೇವಲ ಬಿಡುಗಡೆ ಹೊಂದುವುದಕ್ಕೆ ಮಾತ್ರ ಸಂಬಂಧಿಸದೆ ಸಕಾರತ್ಮಕ ಸಾಮಾಜಿಕ ಬದಲಾವಣೆಗಳನ್ನು ತರುವುದಕ್ಕೂ ಕೂಡ ಸಂಬಧಿಸಿದುದಾಗಿತ್ತು. ಯಾವುದೇ ಒಬ್ಬ ಭಕ್ತ ಅಥವಾ ಸನ್ಯಾಸಿಯ ಪಾತ್ರವನ್ನು ಅಳೆಯುವಾಗ ಸಾಮಾನ್ಯವಾಗಿ ಅವನು ಅಥವಾ ಅವಳು ಧರ್ಮದ ಉನ್ನತಿಗಾಗಿ ಸಲ್ಲಿಸಿದ ಸೇವೆಯನ್ನು ಗಮನಿಸಲಾಗುತ್ತದೆ. ದೈವತ್ವ ಮತ್ತು ಆಧ್ಯಾತ್ಮಿಕತೆಗಳ ಬಗೆಗಿರುವ ಪ್ರೀತಿ ಮಹತ್ವದ್ದಾಗಿರುತ್ತದೇನೋ ನಿಜ. ಆದರೆ ದೇವರ ಬಗೆಗಿರುವ ಭಕ್ತಿ ಮತ್ತು ಜೀವನದ ಬಗೆಗಿರುವ ಪಾವಿತ್ರ್ಯತೆ ಸಮಾಜದ ವ್ಯವಹಾರಿಕ ಸಂಗತಿ ಮತ್ತು ಸಮಸ್ಯೆಗಳ ಮೇಲೆ ಎಷ್ಟು ಪ್ರಭಾವ ಬೀರುತ್ತದೆಂಬುದು ಇನ್ನೂ ಹೆಚ್ಚು ಮಹತ್ವದ ಸಂಗತಿಯಾಗಿದೆ. ತತ್ವಜ್ಞಾನ, ಭೌತ ವಿಜ್ಞಾನ ಮತ್ತು ಇತರ ಪ್ರಾಪಂಚಿಕ ವಿಚಾರಗಳು ನಮ್ಮನ್ನು ಬೆಟ್ಟದ ತುದಿಗೆ ತೆಗೆದುಕೊಂಡು ಹೋಗಬಹುದು ಮತ್ತು ರೋಮಾಂಚಕರವಾದ ಭಾವನೆಗಳಿಂದ ನಮ್ಮನ್ನು ತುಂಬಬಹುದು. ಆದರೆ ಇದಿಷ್ಟೇ ಸಾಲದು. ಕಾವ್ಯ, ಸಾಹಿತ್ಯ ಮತ್ತು ದೈವೀ ಪ್ರೇಮ ಇವು ಆಯಾ ಕಾಲದ ಪ್ರಮುಖ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡು ಹಿಡಿಯದೇ ಇದ್ದಲ್ಲಿ ಅವು ಮಾನವೀಯ

ಅಗತ್ಯಗಳು, ಸಾಮಾಜಿಕ ಬೇಡಿಕೆಗಳು ಮತ್ತು ಪ್ರಪಂಚವನ್ನು ಪೀಡಿಸುತ್ತಿರುವ ಇತರೆ ಮುಖ್ಯ ವಿಷಯಗಳಿಂದ ದೂರ ಉಳಿಯುತ್ತವೆ. ಈ ಸಂದರ್ಭದಲ್ಲಿ ಮೀರಾಬಾಯಿಯ ಸಮಕಾಲೀನ ಪ್ರಸ್ತುತತೆಯನ್ನು ತಿಳಿದುಕೊಳ್ಳಬೇಕು.

ಮೀರಾಬಾಯಿ ಓರ್ವ ಸನ್ಯಾಸಿನಿ-ಕವಿಯತ್ರಿ, ವಿಶ್ವ ಅನೌಪಚಾರಿಕವಾಗಿ ಸ್ವೀಕರಿಸಿದ ಶಾಸಕರು ಕವಿಗಳು ಎಂಬುದಾಗಿ ಪಿ.ಬಿ ಶೆಲ್ಲಿ ಬರೆದಿದ್ದಾರೆ. ಅವರು ಆಡಳಿತಕ್ಕೆ ಸಂಬಂಧಿಸಿದ ಮತ್ತು ವ್ಯವಸ್ಥಿತ ಮಾನವ ನಡವಳಿಕೆಗಾಗಿ ಶಾಸನ ಮಾಡುವುದರ ಜೊತೆಗೆ ಕವಿಗಳೆಂಬ ಈ ಶಾಸಕರು ಜನರನ್ನು ಸಂಘಟಿಸುತ್ತಾರೆ. ಅವರನ್ನು ಕುಶಾಗ್ರಮತಿಗಳನ್ನಾಗಿ ಮಾಡುತ್ತಾರೆ ಮತ್ತು ಜನರ ಕಲ್ಯಾಣಕ್ಕಾಗಿ ನಾಗರಿಕ ಸಮಾಜದ ವಿಶಾಲ ಕ್ಷೇತ್ರದಲ್ಲಿ ಕಾರ್ಯತತ್ಪರರಾಗಿರುತ್ತಾರೆ. ಕಾವ್ಯವು ಜೀವನವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ತಮ್ಮ ಕಾವ್ಯ ಕೃತಿಗಳ ಮೂಲಕ ಕವಿಗಳು ವಿಚಾರಗಳನ್ನು ಅಭಿವ್ಯಕ್ತಿಸುತ್ತಾರೆ ಮತ್ತು ವಿಚಾರಗಳನ್ನು ಭಾವನೆಗಳನ್ನು ಪ್ರಕಟಿಸುತ್ತಾರೆ. ಇವೆಲ್ಲವು ಜನರ ಕಲ್ಪನಾಶಕ್ತಿಯನ್ನು ಚುರುಕುಗೊಳಿಸುತ್ತವಲ್ಲದೆ ಸಮಾಜವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ತಿಳಿದು ಕೊಳ್ಳಲು ಹಾಗೂ ಅದರ ಸಮಸ್ಯೆಗಳನ್ನು ಬೇರೊಂದು ಆಯಾಮದಿಂದ ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಕಾವ್ಯ ಕೃತಿಗಳು ನವಿರಾದ ಮತ್ತು ಅಗಾಧವಾದ ಪರಿಣಾಮವನ್ನು ಜನರ ಮನಸ್ಸಿನ ಮೇಲೆ ಉಂಟು ಮಾಡುತ್ತಾ ಅವರ ಚಿಂತನೆಯಲ್ಲಿ ಹಾಗೂ ದೃಷ್ಟಿಕೋನದಲ್ಲಿ ಬದಲಾವಣೆಯನ್ನೂ ಮಾಡುತ್ತವೆ. ಹೊಸ ವಿಚಾರಗಳು ಮತ್ತು ಒಳನೋಟಗಳ ಹಿನ್ನಲೆಯಲ್ಲಿ ಸಾಮಾಜಿಕ ನಡವಳಿಕೆಗಳ ಪುನರ್‌ಮೌಲ್ಯ ಕಂಡು ಹಿಡಿಯಲೂ ಸಹ ಸಹಾಯಕವಾಗುತ್ತವೆ. ಮೀರಾಬಾಯಿಯ ಶ್ರೀಕೃಷ್ಣನ ಬಗೆಗಿನ ಸ್ತುತಿಗಳು ಮತ್ತು ಭಕ್ತಿಗೀತೆಗಳು ಪ್ರೇಮ ಮತ್ತು ಭಕ್ತಿಯ ಪರಾಕಾಷ್ಠತೆ ಮತ್ತು ವೇದನಾನುಭವದ ಮೂಲಕ ಸೃಷ್ಟಿಗೊಂಡಿವೆ. ಅವು ಜೀವನದ ಬಗ್ಗೆ ಇರುವ ಚೈತನ್ಯವನ್ನು ಉತ್ಕರ್ಷಿಸಿವೆ, ಅದರ ಬಗೆಗಿನ ಗೂಢಾರ್ಥವನ್ನು ಜಾಗೃತಗೊಳಿಸಿವೆ. ಚೈತನ್ಯ ಮತ್ತು ಜೀವನ ಬಗೆಗಿನ ಅರ್ಥ ಇವೆರಡೂ ಸದಾಕಾಲ ಶ್ರೇಣೀಕೃತ ಸಮಾಜದಿಂದ ಮತ್ತು ಕಠೋರವಾದ ಸಾಮಾಜಿಕ ನಿಯಮಗಳಿಂದ ಪ್ರಹಾರಕ್ಕೆ ಒಳಗಾಗಿವೆ.

ಮೀರಾಬಾಯಿಯ ಜೀವನವು ಶತಮಾನಗಳಿಂದಲೂ ಸ್ತ್ರೀಯರ ಪ್ರಭಾವಕಾರಿಯಾದ ಅಸ್ತಿತ್ವವನ್ನು ಪ್ರತಿನಿಧಿಸುತ್ತಾ ಬಂದಿದೆ. ಸಾಮಾಜಿಕ ವ್ಯವಸ್ಥೆಯ ಪುನರ್ ರಚನೆಯ ಅಗತ್ಯತೆಯ ಸಂಕೇತವಾಗಿಯೂ ಇದೆ. ಮಾನವತೆಯನ್ನು ಶತಮಾನಗಳಿಂದ ಬಂಧಿಸಿದ ಬಂಧನಗಳಿಂದ ಬಿಡುಗಡೆ ಮಾಡುವುದರ ಸಂಕೇತವೂ ಆಗಿದೆ. ಮೀರಾಬಾಯಿ ತನ್ನ ಆತ್ಮಸಾಕ್ಷಿ ಮತ್ತು ಆಂತರಿಕ ತುಡಿತವನ್ನು ಆತ್ಮಶುದ್ಧಿಗಾಗಿ, ಪರಮಾನಂದಕ್ಕಾಗಿ ಮತ್ತು ಪರಿಪೂರ್ಣ ಸ್ವಾತಂತ್ರ್ಯಕ್ಕಾಗಿ ಉಪಯೋಗಿಸಿಕೊಂಡಳು. ತನ್ನ ಗಂಡನನ್ನು ಕಳೆದುಕೊಂಡ ಮೇಲೂ ಭಕ್ತಿಯ ಮಾರ್ಗವನ್ನು ಅನುಸರಿಸಿದಳು. ಬಡತನವನ್ನು ಅನುಭವಿಸಿದಳು. ಬಹಿಷ್ಕಾರವನ್ನು ಎದುರಿಸಿದಳು. ತನ್ನ ಕುಟುಂಬ ಮತ್ತು ಸಮಾಜವೇ ಹೇರಿದ ಕಷ್ಟಗಳನ್ನು

ಅನುಭವಿಸಿದಳು. ಭಕ್ತಿ ಮಾರ್ಗದ ಮೂಲಕ ಅವಳ ಪ್ರತಿಭಟನೆ ಮತ್ತು ಪರಂಪರೆಯ ವಿರೋಧದ ದಾರಿಯನ್ನು ಕಂಡುಕೊಂಡಳು. ಜಾತಿಭೇದ ಮತ್ತು ಇತರೆ ಕಟ್ಟುನಿಟ್ಟಾದ ರೂಢಿಗಳನ್ನು ಮತ್ತು ಪದ್ಧತಿಗಳನ್ನು ವಿರೋಧಿಸಿ ತನ್ನ ಸಮಕಾಲೀನ ಸಾಮಾಜಿಕ ವ್ಯವಸ್ಥೆಯಿಂದ ಬಹಳ ಎತ್ತರದಲ್ಲಿ ನಿಂತಳು. ಮೀರಾಬಾಯಿಯ ಬಂಡಾಯವು ಸ್ತ್ರೀಯರ ಪ್ರತ್ಯೇಕತೆಯ ಮೂಲಕ್ಕೇ ಏಟುಕೊಟ್ಟಿತು. ಪರದಾ ಪದ್ಧತಿಯನ್ನು ಅವಳು ವಿರೋಧಿಸಿದ್ದರಿಂದ ತನ್ನ ಅರಮನೆಯ ಸುಖವನ್ನು ತ್ಯಾಗ ಮಾಡಿ ಬೀದಿಗೆ ಬರಬೇಕಾಯಿತು; ಸಾಮಾನ್ಯ ಜನರೊಂದಿಗೆ ಬೆರೆಯಬೇಕಾಯಿತು; ಸಾಧು ಸಂತರೊಂದಿಗೆ ಸಂಪರ್ಕ ಬೆಳಸಿಕೊಳ್ಳಬೇಕಾಯಿತು. ಕುಟುಂಬದ ಗೌರವ ಮತ್ತು ಪರಂಪರೆ ಇತ್ಯಾದಿಗಳನ್ನು ಲೆಕ್ಕಕ್ಕೆ ಇಟ್ಟುಕೊಳ್ಳದೆ ಅವಳು ತನ್ನ ಭಕ್ತರೊಂದಿಗೆ ಬಹಿರಂಗವಾಗಿ ಹಾಡಿದಳು, ಕುಣಿದಳು. ಅವಳ ಒಂದು ಭಕ್ತಿಗೀತೆಯ ಸಾಲು ಈ ರೀತಿ ಇದೆ. "ಟೀಕೆಗಳ ನಂತರವೂ ನಾನು ಸಾಧುಗಳ ಮಧ್ಯೆ ಕುಳಿತು ಕೊಳ್ಳುತ್ತೇನೆ." ಮೀರಾಬಾಯಿಯ ಈ ಮಾತು ತನ್ನ ದಾರಿಯನ್ನು ಅನುಸರಿಸುವ ಬಗ್ಗೆ ಇರುವ ಅವಳ ದೃಢತೆಯನ್ನು ತೋರಿಸುತ್ತದೆ. ಅವಳ ಬಂಡಾಯವನ್ನು ಸಮರ್ಥಿಸುವ ಎರಡೂ ಉದಾಹರಣೆಗಳು ನಮ್ಮ ಸಮಕಾಲೀನ ಸಾಮಾಜಿಕ ಸಮಯದಲ್ಲಿ ಅಸಾಧಾರಣವಾದ ಮಹತ್ವವನ್ನು ಪಡೆದಿದೆ. ಒಂದು, ಅವಳ ಒಬ್ಬ ಚಮ್ಮಾರ ಜಾತಿಯ ರವಿದಾಸ್ ಎಂಬುವವನನ್ನು ತನ್ನ ಪೂಜ್ಯ ಗುರುವೆಂದು ಸ್ವೀಕರಿಸಿದುದು; ಇನ್ನೊಂದು, ತನ್ನ ಗಂಡ ಸತ್ತ ನಂತರ ಸತಿ ಹೋಗಲು ನಿರಾಕರಿಸಿದುದು. ಇವು ಅಂದಿನ ಕಾಲದ ಸ್ತ್ರೀ ವಹಿಸಬೇಕಾಗಿದ್ದ ಪಾತ್ರವನ್ನು ವಿರೋಧಿಸುವುದಾಗಿತ್ತು. ಹಾಗೆಯೇ ಸ್ತ್ರೀಯ ಪಾತ್ರವನ್ನು ಹೊಸದಾಗಿ ವ್ಯಾಖ್ಯಾನಿಸುವುದಾಗಿತ್ತು; ಸ್ತ್ರೀ ಎಂಬ ಶಬ್ದದಲ್ಲಿ ಹೊಸ ಅರ್ಥವನ್ನೂ ಭಾವನೆಯನ್ನೂ ತುಂಬುವುದಾಗಿತ್ತು. ಅವು ವಿಧೇಯಳೂ ನಿಷ್ಕ್ರಿಯಳೂ ಮತ್ತು ಸಮಾಜದ ರೂಢಿಗತ ಪದ್ಧತಿಗಳನ್ನು ಯಾವ ಪ್ರಶ್ನೆಯನ್ನೂ ಹಾಕದೆ ಒಪ್ಪಿಕೊಳ್ಳುವಂಥವಳೂ ಆಗಿರುವ ಸ್ತ್ರೀಯ ಚಿತ್ರವನ್ನೇ ಇಂದ್ರಜಾಲದಂತೆ ಬದಲಾಯಿಸಿದವು. ಹೀಗೆ ಮೀರಾಬಾಯಿಯ ಜೀವನ ಸಕಾರಾತ್ಮಕವಾದ ವಿಮರ್ಶೆ ಮತ್ತು ಕೃತಿಯಾಗಿತ್ತು. ಪ್ರಪಂಚದ ಮೊಟ್ಟಮೊದಲನೆಯ ಹಾಗೂ ಮುಂಚೂಣಿಯಲ್ಲಿರುವ ಸ್ತ್ರೀ ಸ್ವಾತಂತ್ರ್ಯದ ಹೋರಾಟಗಾರ್ತಿಯೆಂದು ಅವಳನ್ನು ಅಭಿನಂದಿಸ ಬಹುದು.

(ಅನು: ಸು.ಕೌ)

(ಮೇನ್‌ಸ್ಟ್ರೀಂ : ಸಾಭಾರ)

ಕನ್ನಡ ಜನಪದ ಪ್ರತಿನಿಧಿ : ಗೊರೂರು

–ವೈ.ಎನ್.ಗುಂಡೂರಾವ್

(ಗೊರೂರರ ಜನ್ಮ ಶತಾಬ್ದಿಯ ನೆನಪಿನಲ್ಲಿ)

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಿಳಿಯಾದ ಹಾಸ್ಯವನ್ನೊಳಗೊಂಡ ಚಿತ್ರಣಗಳನ್ನು ಕೊಟ್ಟು ಬರೆಯುವವರ ಸಂಖ್ಯೆ ವಿರಳ. ಅದರಲ್ಲೂ ಹಳ್ಳಿಯ ಬದುಕಿನ ವಿವಿಧ ವೈಚಿತ್ರ್ಯಗಳನ್ನು ಹಾಸ್ಯಮಯವಾಗಿ ಚಿತ್ರಿಸಿದವರಂತೂ ಇನ್ನೂ ಕಡಿಮೆ. ಇದಕ್ಕೆ ಅಪವಾದವೆನ್ನುವಂತೆ ಹಳ್ಳಿಯಲ್ಲಿಯೇ ಹುಟ್ಟಿ ಬೆಳೆದ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು (೪-೭-೧೯೦೪ : ೨೮-೯-೧೯೯೧) ತಮ್ಮದೇ ಆದ ಸಹಜ, ಸುಂದರ, ಶುದ್ಧ, ಸರಸ ಶೈಲಿಯನ್ನೊಳಗೊಂಡ ಹಾಸ್ಯ ಪ್ರಧಾನವಾದ ಸಾಹಿತ್ಯವನ್ನು ಸೃಷ್ಟಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.

ಕನ್ನಡ ಸಾಹಿತ್ಯದ ನವೋದಯ ಕಾಲ. ಅಂದು ಬರವಣಿಗೆಯಲ್ಲಿ ತೊಡಗಿಕೊಂಡಿದ್ದ ಮಾಸ್ತಿ, ಡಿ.ವಿ.ಜಿ, ಬಿ.ಎಂ.ಶ್ರೀ, ಎ.ಆರ್.ಕೃ., ಬೆಳ್ಳಾವೆ ವೆಂಕಟನಾರಾಯಣಪ್ಪ ಮುಂತಾದವರ ಸಾಲಿಗೇ ಸೇರಿದವರು ಗೊರೂರರು. ಹಳ್ಳಿಯ ಜೀವನದ ವಿವಿಧ ರೀತಿ ನೀತಿಗಳನ್ನು ಅತ್ಯಾಕರ್ಶಕವಾಗಿ ಚಿತ್ರಿಸಿರುವ ಅವರ 'ಹಳ್ಳಿಯ ಚಿತ್ರಗಳು' ಎಂಬ ಕೃತಿಯಿಂದ ಪ್ರಾರಂಭವಾದ ಗೊರೂರರ ಬರವಣಿಗೆಯ ಕೃಷಿ ಅರ್ಧ ಶತಮಾನಕ್ಕೂ ಮಿಕ್ಕು ಹರಡಿದೆ. ಹಳ್ಳಿಯ ಬದುಕನ್ನು ವರ್ಣರಂಜಿತವಾಗಿ ಚಿತ್ರಿಸಿದ್ದಲ್ಲದೆ ಅದಕ್ಕೆ ತಿಳಿಹಾಸ್ಯದ ಕಾಮನಬಿಲ್ಲಿನ ಬಣ್ಣವನ್ನು ತುಂಬಿ ಹಾಸ್ಯಸಾಹಿತ್ಯಕ್ಕೆ ಒಂದು ಮೆರುಗು ಕೊಟ್ಟರು ಅವರು.

ಅವರ ಈ ವಿಶಿಷ್ಟ ಪ್ರಕಾರದ ಕೃತಿರಚನೆಗೆ ಮೂಲದ್ರವ್ಯ ಗೊರೂರರಿಗೆ ಪ್ರಕೃತಿಯೊಂದಿಗಿನ ಹಾಗೂ ತಾವು ಹುಟ್ಟಿ ಬೆಳೆದ ಪರಿಸರದೊಂದಿಗೆ ಇದ್ದ ತಾದಾತ್ಮ್ಯ. ಅವರಿಗೆ ಹಳ್ಳಿಯ ಬದುಕಿನ ನಿತ್ಯಜೀವನದ ಸರಳತೆ ಮುಗ್ಧತೆ, ನೋವು, ನಗೆ, ಸುಖ-ದುಃಖ ಎಲ್ಲವನ್ನೂ ಬರವಣಿಗೆಯಲ್ಲಿ ಕಣ್ಣಮುಂದೆ ನಡೆಯುತ್ತಿರುವಂತೆ ಚಿತ್ರಿಸಲು ಸಾಧ್ಯವಾಯಿತು.

ಅವರ ಬರಹಕ್ಕೆ ಪ್ರಚೋದನೆಯಿತ್ತ ಮತ್ತೊಂದು ಬಹುಮುಖ್ಯ ಸಂಗತಿ ಆ ದಿನಗಳಲ್ಲಿ ಎಲ್ಲೆಡೆ ನಡೆಯುತ್ತಿದ್ದ ರಾಮಾಯಣ ಮಹಾಭಾರತಾದಿ ಪಠಣ. ಶಾಲೆಯ ಪಾಠಕ್ಕಿಂತಲೂ ಇವೇ ಅವರಿಗೆ ಹೆಚ್ಚು ಆಕರ್ಷಕವಾಗಿದ್ದವು. ಮಧ್ಯಾಹ್ನದ ಪಾಠದ ಸಮಯದಲ್ಲೇ ಇವರ ತಂದೆಯವರು ಮನೆಯಲ್ಲಿ ಭೀಮ, ಅರ್ಜುನ, ಘಟೋತ್ಕಚ, ದುರ್ಯೋಧನರ ಸಾಹಸಗಳನ್ನು ವರ್ಣಿಸುತ್ತಿದ್ದರೆ ಇವರಿಗೆ ಶಾಲೆಯಲ್ಲಿ ಕುಳಿತಿರಲು ಹೇಗಾದಿತು? ಕಡೆಗೆ ಶಾಲೆಗೆ ಚಕ್ಕರ್ ಹೊಡೆದು ಮನೆಯ ಜಗಲಿಯ

ಮೇಲೆ ಇತರ ರೈತರ ಜೊತೆ ತಂದೆಗೆ ತಿಳಿಯುದಂತೆ ಕಥೆ ಕೇಳಲು ಬಂದು ಕೂಡುತ್ತಿದ್ದರಂತೆ. ಆದರೆ ಪ್ರತಿದಿನವೂ ಹೀಗೆ ಮಾಡಲಾದೀತೆ? ಉಪಾಧ್ಯಾಯರು ಬಿಡಬೇಕಲ್ಲ! ಕಡೆಗೊಂದು ಉಪಾಯವನ್ನು ಹುಡುಕಿಕೊಂಡರು. ಇವರ ಶಾಲೆಯ ಮೇಷ್ಟರೊಬ್ಬರಿಗೆ ಎಲೆ-ಅಡಿಕೆಯ ಹುಚ್ಚು ವಿಪರೀತ. ಪ್ರತಿಯೊಬ್ಬ ಹುಡುಗನೂ ಒಂದೊಂದು ದಿನ ಮನೆಯಿಂದ ಎಲೆ-ಅಡಿಕೆ ತಂದುಕೊಡಬೇಕಾಗಿತ್ತು. ಗೊರೂರು 'ಪ್ರತಿದಿನ ನಾನೇ ಏಕೆ ಎಲೆ-ಅಡಿಕೆ ತಂದುಕೊಟ್ಟು ಮೆಚ್ಚಿಕೆ ಪಡೆದು ಶಾಲೆಗೆ ಚಕ್ಕರ್ ಹೊಡೆದು ಪುರಾಣ ಕೇಳಬಾರದು?' ಎಂದುಯೋಚಿಸಿದರು. ಆದರೆ ಎಲೆ-ಅಡಿಕೆಗೆ ಹಣ ಬೇಕಲ್ಲ! ಕಾಸಿನ ಲೆಕ್ಕಾಚಾರದ ಕಾಲ ಅದು. ಸುಮಾರು ಸಾವಿರದ ಒಂಬೈನೂರ ಹತ್ತನೇ ಇಸವಿ ಆಜೂಬಾಜು. ಮೂರುಕಾಸು ಬೇಕೆಂದರೂ ಸಿಗದ ಕಾಲ. ಸಿಕ್ಕಿದರೆ ಯಾರಾದರೂ ಕದ್ದುಬಿಡುತ್ತಿದ್ದರಂತೆ. ಆದರೆ ಸಿಗುವಂತೆ ಬಿದ್ದಿರುವುದಾದರೂ ಎಲ್ಲಿ? ಕಡೆಗೆ ನಂಟರೊಬ್ಬರು ಮನೆಗೆ ಬಂದು ಶರಟು ಬಿಚ್ಚಿಟ್ಟದ್ದಾಗ ನಾಲ್ಕಾಣೆ (ಒಂದು ಬೆಳ್ಳಿಯ ಪಾವಲಿ) ಕದ್ದು ಅಂಗಡಿಗೆ ಕೊಟ್ಟು ಹದಿನಾರು ದಿನಕ್ಕೆ ಎಲೆ-ಅಡಿಕೆ ವ್ಯವಸ್ಥೆ ಮಾಡಿಕೊಂಡರಂತೆ. ಆದರೆ ಆ ಅತಿಥಿಯ ಜೇಬಿನಲ್ಲಿ ಕೈ ಹಾಕಿದಾಗ ಹಣ ಸಿಗದೆ ಪೇಚಾಡಿದ್ದನ್ನು ಇವರ ತಂದೆ ಗಮನಿಸಿ ಇವನೇ ತೆಗೆದಿದ್ದಾನೆಂದು ಸಂಶಯಿಸಿ ನಾಲ್ಕು ಬಿಗಿದರಂತೆ. ಆಗ ನಿಜ ಹೇಳಿದಾಗ ಅಂಗಡಿಯವನಿಂದ ವಾಪಸ್ಸು ಪಡೆದು ಅತಿಥಿಗೆ ಹಿಂದಿರುಗಿಸಿದರಂತೆ.

ಇದರಿಂದ ಗೊರೂರರಿಗೆ ಮಹಾ ಸಂಕಟವಾಯಿತು. ಹಣ ಕದ್ದು ಸಿಕ್ಕಿ ಹಾಕಿ ಕೊಂಡಿದ್ದಕ್ಕಲ್ಲ, ಮಾಡಿಕೊಂಡಿದ್ದ ಎಲೆ-ಅಡಿಕೆ ವ್ಯವಸ್ಥೆ ಮುರಿದುಬಿದ್ದುದಕ್ಕೆ. ಕಡೆಗೆ ಹೀಗೆ ಹಣ ಕದ್ದುತರುತ್ತಾನೆಂದು ತಿಳಿದು ಮುಂಜಾಗ್ರತೆಯಾಗಿ ಹಳ್ಳಿಯ ಎಲ್ಲ ಅಂಗಡಿಯವರಿಗೂ ಇವನು ಹಣ ತಂದುಕೊಟ್ಟರೆ ತಿಳಿಸಬೇಕೆಂದು ತಾಕೀತು ಮಾಡಿದರು, ತಂದೆಯವರು.

ಆದರೆ ಗೊರೂರು ಇದಕ್ಕೆಲ್ಲ ಹೆದರುತ್ತಾರೆಯೆ! ಹೊಳೆ ಆಚೆಯ ಒಡ್ಡರಹಳ್ಳಿಗೆ ಹೋಗಿ ಎಲೆ-ಅಡಿಕೆ ಕೊಂಡುತಂದು ಮೇಷ್ಟರಿಗೆ ಕೊಟ್ಟು ಪುರಾಣ ಕೇಳಿ ತಮ್ಮ ಜ್ಞಾನದ ತೃಷೆ ಹಿಂಗಿಸಿಕೊಳ್ಳುತ್ತಿದ್ದರಂತೆ.

ಗೊರೂರರಿಗೆ ಏಕೊ ಶಾಲೆ ಎಂದೂ ಕೂಡಿಬರಲಿಲ್ಲ. ಕಾಲೇಜು ಪರೀಕ್ಷೆ ಓದಿ ಪದವೀಧರರಾಗಲಿಲ್ಲ. ಆದರೆ ೧೯೭೪ರಲ್ಲಿ ಮೈಸೂರು ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟೊರೇಟ್ ನೀಡಿ ಗೌರವಿಸಿತು.

೧೯೧೫ರ ಸುಮಾರು. ಗಾಂಧೀಜೀಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದ್ದರು. ಆ ಕಾಲಕ್ಕೆ ಗಾಂಧೀಜೀ ಭಾರತದಲ್ಲಿ ಅಷ್ಟೇನು ಪ್ರಖ್ಯಾತರಾಗಿರಲಿಲ್ಲ. ಬಾಲಗಂಗಾಧರ ತಿಲಕ್ ಮೊದಲಾದವರ ಹೆಸರು ಹೆಚ್ಚು ಪ್ರಚಲಿತವಾಗಿದ್ದ ಕಾಲ. ತಿಲಕ್ ಅವರ ಹೆಸರು ಕೇಳಿದರೆ ಭಾರತೀಯರು ರೋಮಾಂಚನಗೊಳ್ಳುತ್ತಿದ್ದರು. ಆಗ ದಿನನಿತ್ಯವೂ ಬ್ರಿಟಿಷ್ ಅಧಿಕಾರವನ್ನು ಖಂಡಿಸುವ,

ಆಜ್ಞೆಗಳನ್ನು ತಿರಸ್ಕರಿಸುವ ರೀತಿಯಲ್ಲಿ ಪತ್ರಿಕೆಯ ಮುಖಾಂತರ ಅವರು ಆಡಳಿತದ ಮೇಲೆ ವಾಕ್ಪ್ರಹಾರ ಮಾಡುತ್ತಿದ್ದರು. ಚಳುವಳಿಗಳನ್ನು ದೇಶದಲ್ಲೆಲ್ಲ ನಡೆಸುತ್ತಿದ್ದರು. ರೌಲತ್ ಶಾಸನ, ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಮುಂತಾದವುಗಳ ಸುದ್ದಿಯಿಂದ ಪ್ರಚೋದಿತರಾದ ಭಾರತೀಯರು ದೇಶದ ಒಂದಲ್ಲೊಂದು ಕಡೆ ಹರತಾಳ ನಡೆಸದ ದಿವಸವೇ ಇರುತ್ತಿರಲಿಲ್ಲವೇನೊ.

೧೯೨೦ರ ಆಗಸ್ಟ್ ೧ರಂದು ತಿಲಕರು ನಿಧನರಾದ ಸುದ್ದಿ ಇಡೀ ದೇಶಕ್ಕೆ ಹಬ್ಬಿದಾಗ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ಶಾಲೆ ತೊರೆದು ರಸ್ತೆಗಿಳಿದರು. ಈ ಸುದ್ದಿ ಹಾಸನದ ಹೈಸ್ಕೂಲು ವಿದ್ಯಾರ್ಥಿಗಳನ್ನು ಬಿಟ್ಟೀತೆ? ತರಗತಿ ತೊರೆದು ವಿದ್ಯಾರ್ಥಿಗಳು ಯಾರ ಪ್ರೇರಣೆಯೂ ಇಲ್ಲದೆ ತಿಲಕರ ಮತ್ತು ಗಾಂಧೀಜೀಯವರ ಭಾವಚಿತ್ರಗಳನ್ನು ಹಿಡಿದು ಊರೆಲ್ಲ ಮೆರವಣಿಗೆ ಹೊರಟರು. ಯಾರು ಮುಂದೆ ತಳ್ಳದಿದ್ದರೂ ಸ್ವಯಂ-ಘೋಷಿತ ಮುಖಂಡರಾಗಿ ಅಂದಿನ ಮೆರವಣಿಗೆಯ ಮುಂಚೂಣಿಯಲ್ಲಿದ್ದರಂತೆ ಗೊರೂರರು. ಅನಂತರವೇ ಇವರಿಗೆ 'ಶಾಲೆಯೊಳಗೆ ಕುಳಿತು ಇಂಗ್ಲಿಷ್, ಆಲ್ ಜಿಬ್ರಾ, ಸೈನ್ಸ್ ಎಂಬ ರಗಳೆಯಾದರೂ ಏಕೆ? ಸ್ವಾತಂತ್ರ್ಯವಿಲ್ಲದ ಈ ವಿದ್ಯೆಗೆ ಬೆಲೆಯಾದರೂ ಎಲ್ಲಿದೆ?' ಎಂದೆನಿಸಿ ಶಾಲೆ ತೊರೆದು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು.

ಸ್ವಾತಂತ್ರ್ಯದ ದಾಹ, ಚಳುವಳಿಯ ಹುಚ್ಚು ಇವರಿಗೆ ಎಷ್ಟಿತ್ತೆಂದರೆ "ಯುವಕನಿಗೆ ತಾನು ಪ್ರೀತಿಸಿದ ಯುವತಿಯ ಮೇಲೆ ಎಷ್ಟು ತದೇಕಧ್ಯಾನವೋ ಸ್ವರಾಜ್ಯವನ್ನು ಕುರಿತ ಸಾಧನೆ ನನಗೆ ಅದಕ್ಕಿಂತ ಹೆಚ್ಚು ಪ್ರಿಯವಾಗಿತ್ತು. ಸ್ವರಾಜ್ಯದ ಗುಂಗಿನ ಹುಚ್ಚು ಹತ್ತಿತ್ತು. ಯಾವಾಗಲೂ ಅದೇ ಯೋಚನೆ. ನಿದ್ರೆಯಲ್ಲಿಯೂ ಅದೇ ಯೋಚನೆ. ನಿದ್ರೆಯಲ್ಲಿಯೂ ಅದೇ ಕನಸು" ಎಂದು ಅವರೇ ಹೇಳಿಕೊಂಡಿದ್ದಾರೆ.

ಒಮ್ಮೆ ಧಾರವಾಡದಲ್ಲಿ ನಡೆದ ಸಭೆಯಲ್ಲಿ ಬ್ರಿಟಿಷರನ್ನು ವಾಚಾಮಗೋಚರ ಬೈದಾಗ ಹಿಂದಿನಿಂದ ಬಂಧಿಸಲು ಪೊಲೀಸರು ಬರುತ್ತಿದ್ದಾರೆಂದು ಸುದ್ದಿತಿಳಿದ ಇವರ ಸ್ನೇಹಿತರು ಮುಂಬಯಿ ರೈಲು ಹತ್ತಿಸಿ ಬಚಾವು ಮಾಡಿದರು. ಅನಂತರ ಅಹಮದಾಬಾದ್ ಸೇರಿ ಕಾಂಗ್ರೆಸ್ ಸ್ವಯಂಸೇವಕರಾದರು. ಗುಜರಾತ್ ಆಶ್ರಮದಲ್ಲಿ ಗಾಂಧಿಜೀ ಜೊತೆ ಪ್ರಾರ್ಥನೆಯಲ್ಲಿ ಭಾಗವಹಿಸುವುದರ ಜೊತೆಗೆ ಕಟ್ಟುನಿಟ್ಟಿನ ಆಶ್ರಮಜೀವನವನ್ನು ರೂಢಿಸಿಕೊಂಡರು. ಅಲ್ಲಿಂದ ಬೆಂಗಳೂರಿಗೆ ಹಿಂದಿರುಗಿದ ಮೇಲೆ ಕೆಂಗೇರಿಯ ಗುರುಕುಲಾಶ್ರಮ ಎಂಬ ಸಂಸ್ಥೆಗೆ ಸೇರಿದರು.

ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ಓದಿನ ಹುಚ್ಚಿಗೆ ಬಿದ್ದ ಗೊರೂರರು ಬಿ.ವೆಂಕಟಾಚಾರ್ಯ, ಗಳಗನಾಥ ಮುಂತಾದವರ ಕಾದಂಬರಿಗಳೆಲ್ಲವನ್ನೂ ಓದಿ ಮುಗಿಸಿದ್ದರು. ತಮ್ಮ ಇಪ್ಪತ್ತೈದನೆಯ ವಯಸ್ಸಿನ ವೇಳೆಗೆ ಅದುವರೆಗೆ ಲಭ್ಯವಿದ್ದ, ಪಂಪಭಾರತ, ಆದಿಪುರಾಣ, ಗದಾಯುದ್ಧ, ಜೈಮಿನಿ ಭಾರತ, ಕುಮಾರವ್ಯಾಸ

ಭಾರತ, ನೇಮಿನಾಥಪುರಾಣ ಮುಂತಾದವುಗಳನ್ನೆಲ್ಲಾ ಓದಿದ್ದಾಗಿತ್ತು. ಹೀಗೆ ಓದುತ್ತ ಓದುತ್ತ ತಾನೇಕೆ ಬರೆಯಬಾರದೆನ್ನಿಸಿ ಬರೆದ ಮೊದಲ ಲೇಖನ ಮೈಸೂರಿನ ವೃದ್ಧಪಿತಾಮಹ ದಿವಂಗತ ವೆಂಕಟಕೃಷ್ಣಯ್ಯ ನವರು ನಡೆಸುತ್ತಿದ್ದ 'ಸಾಧ್ವಿ' ಪತ್ರಿಕೆಯಲ್ಲಿ ಪ್ರಕಟಗೊಂಡಾಗ ಇವರ ಸಂತಸಕ್ಕೆ ಪಾರವೇ ಇಲ್ಲ.

ಅನಂತರ ಆಲೂರ ವೆಂಕಟರಾಯರು ನಡೆಸುತ್ತಿದ್ದ 'ಜಯಕರ್ನಾಟಕ' ಪತ್ರಿಕೆಗೂ ಬರೆದರು. 'ಜಯಕರ್ನಾಟಕ' ಅಂದಿನ ಶ್ರೇಷ್ಠ ಮಟ್ಟದ ಪತ್ರಿಕೆಯಾಗಿತ್ತು. ಕೆ. ವಿ.ಪುಟ್ಟಪ್ಪನವರು 'ಕಿಶೋರಚಂದ್ರವಾಣಿ' ಎಂಬ ಕಾವ್ಯನಾಮದಿಂದ ಬರೆಯುತ್ತಿದ್ದರು. ಜೊತೆಜೊತೆಗೆ ಶಿವರಾಮ ಕಾರಂತರ 'ವಸಂತ' ಪತ್ರಿಕೆಗೂ ಗೊರೂರರು ಬರೆದರು.

ಹೀಗೆ ಬರೆಯಲು ಪ್ರೇರಣೆ ಪಡೆದ ಗೊರೂರರಿಗೆ ಇದ್ದ ಹಳ್ಳಿಯ ಸಮಸ್ತ ಜನಾಂಗದ ನಿಕಟಪರಿಚಯ, ವೈವಿಧ್ಯಮಯ ಬದುಕಿನ ಬಗ್ಗೆ ಅರಿವು, ಅಧ್ಯಯನ, ಸಂಸ್ಕೃತ ಸಾಹಿತ್ಯದಿಂದ ಹುಟ್ಟಿದ ಸದಭಿರುಚಿ, ಎಲ್ಲಕ್ಕಿಂತ ಮಿಗಿಲಾಗಿ ರಸಿಕತೆಯಿಂದ ವರ್ಣಿಸುವ ಕಲೆಗಾರಿಕೆ ಇದ್ದುದರಿಂದಲೇ ಇವರ ಮೊದಲ ಕೃತಿ 'ಹಳ್ಳಿಯ ಚಿತ್ರಗಳು' ಪ್ರಕಟಗೊಂಡಾಗ (೧೯೩೦) ಅದು ವಿಶಾಲ ಜನಮನ್ನಣೆಗಳಿಸಿತು. ಇವರ ತಿಳಿಹಾಸ್ಯದ ಬರಹದಿಂದ ಹಾಸ್ಯ ಬರಹಗಾರರೆಂದೇ ಕ್ರಮೇಣ ಪ್ರಸಿದ್ಧಿ ಪಡೆದರು.

ಇವರ ಪ್ರಸಿದ್ಧಿಯನ್ನು ಗಮನಿಸಿದ ಬೆಂಗಳೂರಿನ ಕಾಲೇಜೊಂದರ ಕರ್ನಾಟಕ ಸಂಘದ ಮುಕ್ತಾಯ ಸಮಾರಂಭದ ಭಾಷಣಕ್ಕೆ ಗೊರೂರನ್ನೇ ಮುಖ್ಯ ಅತಿಥಿಯಾಗಿ ಆಹ್ವಾನಿಸಿದರಂತೆ. ಅದು ಸಂಘದ ಕಾರ್ಯದರ್ಶಿ ಗೊರೂರನ್ನು ಹಾಸ್ಯ ಬರಹಗಾರರು, ಹಾಸ್ಯಗಾರರು ಎಂದೇ ಪರಿಚಯಿಸಿದರಂತೆ. ಇದಕ್ಕೆ ಕೊಂಚ ಅಸಮಾಧಾನಗೊಂಡ ಗೊರೂರರು "ಜೀವನವೆಲ್ಲಾ ಹಾಸ್ಯ ಮಾಡುತ್ತಿರುವುದೇ ನನ್ನ ಉದ್ಯೋಗ ಎಂದು ಜನ ತಿಳಿದಂತಿದೆ. ಇದು ತಪ್ಪು ಭಾವನೆ" ಎಂದು ಪ್ರಾರಂಭಿಸಿ ಅಂದಿನ ಭಾಷಣಕ್ಕೆ ಗಂಭೀರ ವಿಷಯವನ್ನಾಯ್ದುಕೊಂಡು ಭಾಷಣ ಮಾಡಿದರಂತೆ. ಅಂದೇಕೆ ಆರೀತಿ ನುಡಿದರೋ, ಯಾರೂ ಊಹಿಸಲಾಗದು.

ಕಾರ್ಯದರ್ಶಿ ಪರಿಚಯಿಸಿದಂತೆ ಗೊರೂರರಿಗೆ ಮಾತು ಮಾತಿನಲ್ಲೂ ಹಾಸ್ಯದ ಹೊನಲು ಹರಿಸುವ ಶಕ್ತಿಯಿತ್ತು, ಯಾವುದೇ ಸಂದರ್ಭವನ್ನಾಗಲಿ ಹಾಸ್ಯಕ್ಕೆ ಮಾರ್ಪಡಿಸುವ ಚಾಕಚಕ್ಯತೆಯಿತ್ತು.

ಶಿವರಾಮ ಕಾರಂತರು ಪುತ್ತೂರಿನಲ್ಲಿ ನಾಡಹಬ್ಬವನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಿದ್ದ ಕಾಲ ಅದು. ಕನ್ನಡನಾಡಿನ ವಿದ್ವಾಂಸರನ್ನೆಲ್ಲಾ ಆಹ್ವಾನಿಸಿ ಸನ್ಮಾನಿಸುತ್ತಿದ್ದರು.

೧೯೩೬ರ ಸುಮಾರಿನಲ್ಲಿ ತೀ.ನಂ.ಶ್ರೀ ಹಾಗೂ ಗೊರೂರರನ್ನು ಆಹ್ವಾನಿಸಿದ್ದರು. ಗೊರೂರರು ಮೈಸೂರಿಗೆ ಹೋಗಿ ಅಲ್ಲಿಂದ ತೀ.ನಂ.ಶ್ರೀಯವರ

ಜೊತೆಯಲ್ಲಿಯೆ ಪುತ್ತೂರಿಗೆ ಹೊರಟರು. ಪುತ್ತೂರು ತಲುಪಿದಾಗ ಕಾರಂತರ ಮನೆ ನೋಡಿ ಅವಾಕ್ಕಾದರು. ಕಾರಂತರು ತಮ್ಮ ಮನೆಯ ಮುಂದಿನ ಕೈತೋಟದಲ್ಲಿ ಹಾವು, ಜಿಂಕೆ, ಮುಂಗುಸಿ,ಪಾರಿವಾಳ ಮುಂತಾದ ಪ್ರಾಣಿ-ಪಕ್ಷಿಗಳನ್ನೆಲ್ಲ ಸಾಕಿದ್ದರು! ಆದರೆ ಎಲ್ಲಕ್ಕಿಂತ ಹೆಚ್ಚಾದ್ದೆಂದರೆ ಎರಡು ಬಲವಾದ ಹುಲಿಯಂತಿದ್ದ ನಾಯಿಗಳು. ಒಂದಂತೂ ರಾಕ್ಷಸಾಕಾರದ ನಾಯಿ. ಇದನ್ನು ನೋಡಿದ ಇಬ್ಬರಿಗೂ ಜಂಘಾಬಲವೇ ಉಡುಗಿಹೋಯಿತಂತೆ. ಸಾಲದ್ದಕ್ಕೆ ಕಾರಂತರು ರಾಕ್ಷಾಸಾಕಾರದ ನಾಯಿ ತೋರಿಸಿ, "ನೋಡಿ ಈ ಒಂದು ನಾಯಿ ಹೊಸದು, ಮನುಷ್ಯರ ವಾಸನೆಗೆ ಇನ್ನೂ ಪಳಗಿಲ್ಲ. ಮಹಾ ಜೋರು, ಹೆದರಿಕೊಳ್ಳಬೇಡಿ, ಅದಕ್ಕೆ ಬಲು ಸೂಕ್ಷ್ಮ ಬುದ್ಧಿ. ಹೆದರಿದರೆ ಹೆದರಿಸುತ್ತೆ, ಒಂದೇ ನೆಗೆತಕ್ಕೆ ಹಿಡಿದುಬಿಡುತ್ತೆ. ನಿಮ್ಮ ಪಾಡಿಗೆ ನೀವು ಅದರ ಕಡೆ ಲಕ್ಷ್ಯ ಕೊಡದೆ ತಿರುಗಾಡಿ" ಎಂದರು! ಭಯದಿಂದಲೇ ತೀ.ನಂ.ಶ್ರೀಯವರು "ಕಟ್ಟಿದ್ದೀರಿ ತಾನೆ?" ಎಂದರಂತೆ. ಅಯ್ಯೋ ಈ ನೂಲು ಅವಕ್ಕೆ ಸಾಕೆ? 'ಸಿಡಿಲು ಬಡಿದರೆ ಹಿಡಿದ ಕೊಡೆ ಕಾವುದೇ' ಎಂದು ಬೇರೆ ಹೆದರಿಸಿದರು. "ಸರಿ, ಯಾವ ಟ್ರೆಜರಿ ಕಾಯಲು ಈ ಯಮನಂತಹ ನಾಯಿ ಸಾಕಿದ್ದೀರಿ?" ಎಂದರು ಗೊರೂರರು. ಅದಕ್ಕೆ ಕಾರಂತರು "ನೋಡಿಯಪ್ಪ, ನೀವೇನೋ ಮಹಾರಾಜರ ಆಳ್ವಿಕೆಯಲ್ಲಿರುವವರು... ಹೋಗಲೀ ಬಿಡಿ, ಸುರಕ್ಷಿತವಾಗಿ ಹಿಂದಕ್ಕೆ ನಿಮ್ಮನ್ನು ಕಳುಹಿಸುವ ಹೊಣೆ ನನ್ನದು, ಯೋಚಿಸಬೇಡಿ, ಧೈರ್ಯವಾಗಿರಿ" ಎಂದರಂತೆ.

ಕಾರಂತರು ಹೇಳಿದಂತೆ ಈ ನಾಯಿಯನ್ನು ನೋಡುತ್ತಿದ್ದ ಈ ಇಬ್ಬರಿಗೂ "ನಾಯಿಯ ಕಡೆ ಲಕ್ಷ್ಯ ಕೊಡಬೇಡಿ, ಇಲ್ಲದಿದ್ದರೆ ಒಂದೇ ನೆಗೆತಕ್ಕೆ ಹಿಡಿದುಬಿಡುತ್ತೆ" ಎಂದದ್ದೇ ಕಿವಿಯಲ್ಲಿ ಗುನುಗುಡತೊಡಗಿತು. ನಾಯಿಯಂತೂ ಕಂಡಾಗಲೆಲ್ಲಾ 'ಗುರ್' ಎನ್ನುತ್ತಿತ್ತು. ಆದರೆ ಕೆಲವು ಸಾರೆ ತೀ.ನಂ.ಶ್ರೀ ಯವರನ್ನು ನೋಡಿ ಬೊಗಳಿದರೆ ಗೊರೂರರನ್ನು ಕಂಡರೆ ಸುಮ್ಮನಿರುತ್ತಿತ್ತು. ಇದನ್ನು ನೋಡಿದ ತೀ.ನಂ.ಶ್ರೀ ಯವರು "ಸಮಾನಶೀಲವ್ಯಸನೇಷು.." ಎಂದು ಛೇಡಿಸಿದರಂತೆ. ಅದಕ್ಕೆ ಗೊರೂರರು "ನನಗೇನೋ ಸಂಸ್ಕೃತ ಅರ್ಥವಾಯ್ತು, ಆದರೆ ನಾಯಿಗೆ ಈ ವಾಕ್ಯ ತಿಳಿದಿರಬೇಕಲ್ಲ!" ಎಂದು ತಿರುಗೇಟು ಕೊಟ್ಟರು.

ಅಂದು ರಾತ್ರಿ ಒಂದು ಹೊತ್ತಿನಲ್ಲಿ ನಾಯಿ ಜೋರಾಗಿ ಬೊಗಳತೊಡಗಿತು. ಗೊರೂರರು ಮಲಗಿದಲ್ಲಿಂದಲೇ ಕಣ್ಣು ಹಾಯಿಸಿದರೆ ತೀ.ನಂ. ಶ್ರೀಯವರು ಹೊರಗೆ ಹೋಗಲು ಬಾಗಿಲ ಬಳಿ ನಿಂತಿದ್ದಾರೆ. ನಾಯಿಯ ಕಣ್ಣುಗಳು ಕತ್ತಲೆಯಲೆಯಲ್ಲಿಯೂ ಗೋಲಾಕಾರದ ಕೆಂಪು ದೀಪದಂತೆ ಹೊಳೆಯುತ್ತಿವೆ. ಆಗ ಶ್ರೀಕಂಠಯ್ಯನವರು ಬೊಗುಳುತ್ತಿದ್ದ ನಾಯಿಯನ್ನು ಸಮಾಧಾನಪಡಿಸಲು ಮೃದುವಾಗಿ "ಯಾಕೋ, ಸುಮ್ಮನಿರೋ.. ನಾನೂ ಈ ಮನೆಯವನೇ ಕಣೋ . . . ನನ್ನನ್ನು ಅಭ್ಯಾಸ ಮಾಡಿಕೊಳ್ಳೋ ! ಗೊರೂರರನ್ನು ಕಂಡರೆ ಸುಮ್ಮನಿರುತ್ತಿ.

ಹೀಗೇನೋ ನೀನು ಅತಿಥಿಗಳನ್ನು ಸತ್ಕರಿಸೋದು? ಇದರಿಂದ ನಿನ್ನ ಯಜಮಾನರಿಗೆ ಕೆಟ್ಟ ಹೆಸರು ಬರೋಲ್ವಾ?" ಎನ್ನುತ್ತಿದ್ದುದನ್ನು ನೋಡಿದ ಗೊರೂರರು "ಎಷ್ಟಾದರೂ ಮೇಷ್ಟರಲ್ಲವೆ? ಯಾವಾಗಲೂ ಪಾಠ ಮಾಡಿಯೇ ಅಭ್ಯಾಸ. ಎದುರಿಗಿರುವುದು ವಿದ್ಯಾರ್ಥಿಯೋ, ನಾಯಿಯೋ, ಮರವೋ ಯಾವುದಾದರೂ ಒಂದೇ.." ಎಂದು ತೀ.ನಂ.ಶ್ರೀಯವರನ್ನು ರೇಗಿಸಿದರಂತೆ. ಹೀಗಿತ್ತು ಅವರ ಸಂದರ್ಭಕ್ಕೆ ತಕ್ಕಂತೆ ಮಾತನಾಡುತ್ತಿದ್ದ ಪರಿ.

ಹೀಗೆ ಗೊರೂರರು ಕಾಲೇಜು ಮೆಟ್ಟಿಲು ಹತ್ತದಿದ್ದರೂ ಹಲವಾರು ಶಾಲಾ ಕಾಲೇಜುಗಳ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ವಿದ್ಯಾರ್ಥಿಗಳು, ಪ್ರಾಧ್ಯಾಪಕರನ್ನುದ್ದೇಶಿಸಿ ಭಾಷಣ ಮಾಡಿದ್ದಾರೆ.

ಸುಮಾರು ೧೯೩೦-೩೧ರ ಸಮಯ. 'ಹಳ್ಳಿಯ ಚಿತ್ರಗಳು' ಪ್ರಕಟಗೊಂಡಿತ್ತು. ಹಳ್ಳಿಯ ಬದುಕನ್ನು, ಅಲ್ಲಿಯ ಜನರ ರೀತಿರಿವಾಜುಗಳನ್ನು ಯಥಾವತ್ತಾಗಿ, ಸೊಗಸಾಗಿ ಚಿತ್ರಿಸಿದ್ದುದರಿಂದ ಅನೇಕ ಓದುಗರ ಮೆಚ್ಚುಗೆಗೆ ಪಾತ್ರವಾಗಿತ್ತು, ಆ ಕೃತಿ. ಇದನ್ನು ಅಂದಿನ ಮೈಸೂರಿನ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಎನ್.ಎಸ್.ಸುಬ್ಬರಾಯರು ಓದಿ, ಗೊರೂರರನ್ನು ಪದವೀಧರರೆಂದು ಭಾವಿಸಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪರೀಕ್ಷಕರೆಂದು ನೇಮಿಸಿದರು. ಆದರೆ ಗೊರೂರರು ವಿಶ್ವವಿದ್ಯಾಲಯದ ಯಾವುದೇ ಪರೀಕ್ಷೆಯನ್ನು ಪಾಸು ಮಾಡಿಲ್ಲವೆಂದು ಮೇಲಿನ ಪರೀಕ್ಷಾಧಿಕಾರಿಗಳು ಹೊಟ್ಟೆಯುರಿದುಕೊಂಡು ಸುಬ್ಬರಾಯರಲ್ಲಿ ದೂರು ಕೊಟ್ಟರು. "ಅವರು ಯಾವ ಪರೀಕ್ಷೆ ಪಾಸು ಮಾಡದಿದ್ದರೇನಂತೆ, 'ಹಳ್ಳಿಯ ಚಿತ್ರಗಳು' ಪುಸ್ತಕ ಬರೆದಿಲ್ಲವೆ? ಸಾಕು" ಎಂದು ಸುಬ್ಬರಾಯರು ದೂರು ತಂದವರ ಬಾಯಿ ಮುಚ್ಚಿಸಿದರೂ, ಆ ನಂತರ ಗೊರೂರರನ್ನು ಕರೆದು ಕೇಳಿದರು: "ಏನ್ರೀ, ನೀವು ಬಿ.ಎ. ಪಾಸು ಮಾಡಿಲ್ಲವೆ?" "ಇಲ್ಲ ಸಾರ್." "ಇಂಟರ್‌ಮೀಡಿಯೆಟ್ ಮಾಡಿಲ್ಲವೆ?" "ಇಲ್ಲಸಾರ್." "ಹೋಗಲಿ, ಎಸ್.ಎಸ್.ಎಲ್.ಸಿ. ಮಾಡಿದ್ದೀರಾ ತಾನೆ?" "ಅದೂ ಇಲ್ಲ ಸಾರ್! ನಾನು ಯಾವ ಪರೀಕ್ಷೆಯನ್ನೂ ಪ್ಯಾಸು ಮಾಡಿಲ್ಲ" – ಎಂದು ಗೊರೂರರು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡರು.

ಕಡೆಗೆ ಸುಬ್ಬರಾಯರಿಗೆ ಆಶ್ಚರ್ಯವಾಗಿ "ಹೋಗಿಪ್ಪ ಹೋಗಿ, ಯಾವುದಾದರೊಂದು ಪರೀಕ್ಷೆಗೆ ಕಟ್ಟಿ ಪ್ಯಾಸು ಮಾಡಿಕೊಳ್ಳಿ. ನೀವು ಬರೆದಿರುವ 'ಹಳ್ಳಿಯ ಚಿತ್ರಗಳು' ಓದಿ ಪದವೀಧರರೆಂದು ಭಾವಿಸಿದ್ದೆನಲ್ಲ!" ಎಂದರಂತೆ. "ಆಗಲಿ ಸಾರ್" ಎಂದು ಹೊರಟ ಗೊರೂರರಿಗೆ ಯಾವ ವಿಶ್ವವಿದ್ಯಾಲಯದ ಪದವಿಯ ಅವಶ್ಯಕತೆಯೂ ಇಲ್ಲದಿದ್ದರೂ ಇತರರಿಗಾಗಿ ಯಾದರೂ ತಾವೊಬ್ಬ ಪದವೀಧರ ಎನ್ನಿಸಿಕೊಳ್ಳಬೇಕೆಂಬ ಹಂಬಲದಿಂದ ಮದ್ರಾಸ್ ವಿಶ್ವವಿದ್ಯಾಲಯದ

ಪರೀಕ್ಷೆಗೆ ಕಟ್ಟಿದರು.

ಅದೊಂದು ಇನ್ನೂ ಅತಿ ಸ್ವಾರಸ್ಯವಾದ ಪ್ರಸಂಗ. ತಾವೇ ಬರೆದಿದ್ದ 'ನಮ್ಮ ಊರಿನ ರಸಿಕರು' ಪಠ್ಯಪುಸ್ತಕವನ್ನೋದಬೇಕಾಗಿ ಬಂದ ದುರ್ಗತಿ! ಇವರು ಬರೆದಿದ್ದ 'ನಮ್ಮ ಊರಿನ ರಸಿಕರು' ಅಲ್ಲಿ ಪಠ್ಯಪುಸ್ತಕವಾಗಿ ಆಯ್ಕೆಯಾಗಿತ್ತು. ವಿಧಿಯಿಲ್ಲದೆ ತಾವೇ ಬರೆದುದನ್ನು ಓದಿದರು.

ಇದೊಂದು ಪ್ರಯಾಸದ ಕೆಲಸವೇ ಸರಿ. ತಾವೇ ಬರೆದು ಪ್ರಕಟಿಸಿರುವಾಗ ಕರಡು ತಿದ್ದಲು ಓದುವುದೇ ಬೇಸರದ ಸಂಗತಿ. ಅಂಥಾದ್ದರಲ್ಲಿ ಪರೀಕ್ಷೆಗೆಂದು ಅವರೇ ಬರೆದ ಪುಸ್ತಕವನ್ನು ಅವರೇ ಓದುವುದೆಂದರೆ? ಪರೀಕ್ಷೆ ಬಂತು, ಮುಗಿಯಿತು. ತೇರ್ಗಡೆಯೂ ಆದರು. ಆದರೆ ಪರೀಕ್ಷಕರಾಗಿದ್ದ ಮುಳಿಯ ತಿಮ್ಮಪ್ಪಯ್ಯನವರು "ನಿಮ್ಮ ಪುಸ್ತಕದ ಮೇಲೆ ನೀವು ಬರೆದ ಉತ್ತರಗಳಿಗೆ ಇನ್ನೂ ಕಡಿಮೆ ಅಂಕಗಳು ಬರಬೇಕಿತ್ತು" ಎಂದರಂತೆ.

ಇದು ಗೊರೂರರು ವಿದ್ವಾನ್ ಪರೀಕ್ಷೆ ಪ್ಯಾಸು ಮಾಡಿದ ಸಂಗತಿ. ಆದರೆ ಅವರಿಗೆ ಇದರಿಂದ ಲಾಭವಾಯಿತೋ ಬಿಟ್ಟಿತೋ, ಅವರಿಗೆ ಬದುಕನ್ನು ಓದಿದ್ದರಿಂದ ಸಿಕ್ಕಿದ ಲಾಭದ ಮುಂದೆ ಇವೆಲ್ಲ ತೃಣವೇ!

ಗೊರೂರರದು ಸನಾತನ-ನೂತನ, ಮೂಡಣ-ಪಡುವಣಗಳ ಸಾಮರಸ್ಯದ ಜ್ಞಾನದಿಂದ ಪ್ರೌಢತೆ ಪಡೆದ ವ್ಯಕ್ತಿತ್ವ. ಅವರು ಚೇತನದ ಕಿಟಕಿ ಬಾಗಿಲುಗಳನ್ನು ತೆರೆದಿಟ್ಟು ಎಲ್ಲೆಡೆಯಿಂದಲೂ ಒಳ್ಳೆಯ ಗಾಳಿ-ಬೆಳಕನ್ನು ಬರಮಾಡಿಕೊಳ್ಳಲು ಸಿದ್ಧರಿದ್ದರು. ಇದರಲ್ಲಿ ಯಾವುದೇ ಪೂರ್ವಗ್ರಹಪೀಡಿತರಾಗಿರಲಿಲ್ಲವೆಂಬುದಕ್ಕೆ ಅವರು ಸಾಹಿತ್ಯದಲ್ಲಿ ಜೀವನವನ್ನು ಪ್ರತಿಬಿಂಬಿಸುತ್ತಿದ್ದ ರೀತಿಯೇ ಸಾಕ್ಷಿ.

ದೇಶ, ಕಾಲ ಎಲ್ಲವನ್ನೂ ಮೀರಿ ಬೆಳೆದು ನಿಂತಿರುವ ಮೂಢನಂಬಿಕೆಗಳು ಎಲ್ಲ ದೇಶದ ಎಲ್ಲ ಜನಾಂಗದಲ್ಲೂ ಬೇರುಬಿಟ್ಟಿರುವಂತಹದೇ. ಸಾಹಿತಿಯಾದವನು ಕಿಂಚಿತ್ತಾದರೂ ಸಮಾಜದ ಓರೆಕೋರೆಗಳನ್ನು ತಿದ್ದುವ ಪ್ರಯತ್ನ ಪಡದಿದ್ದಲ್ಲಿ ಅವನು ಲೇಖಕನೆ? - ಎಂಬ ನಿರ್ಧಾರಕ್ಕೆ ಬಂದು ಗೊರೂರರು ವಾಸ್ತವತೆಯ ನೆಲೆಯಲ್ಲಿ ಯೋಚಿಸಿದರು. ಅಂದು ಬ್ರಾಹ್ಮಣ ಸಮಾಜದಲ್ಲಿದ್ದ ವಿಧವೆಯರು ಎಂದೂ ಮುಡಿಯನ್ನು ಲಕ್ಷಣವಾಗಿ ಬಾಚಿಕೊಂಡು ಸುಂದರವಾಗಿ ಕಾಣಿಸುವುದು ಧರ್ಮಸಮ್ಮತವಲ್ಲವೆಂದೇ ವೈದಿಕ ಪಂಡಿತರ ಅಭಿಪ್ರಾಯವಾಗಿತ್ತು. ಆದರೆ ಪರಪುರುಷನೊಬ್ಬ ಅದೆಂತು ಮಹಿಳೆಯ ಜುಟ್ಟನ್ನು ಹಿಡಿದು ಬೋಳಿಸುವುದು ಧರ್ಮಸಮ್ಮತವಾದೀತು?- ಎಂದು ಚಿಂತಿಸಿದ ಗೊರೂರರು "ಪ್ರತಿವ್ರತೆಯಾದ ಸ್ತ್ರೀಯನ್ನು ಮುಟ್ಟುವ ಮೊದಲ ಅಧಿಕಾರ ಗಂಡನಿಗೆ-ಎರಡನೆಯ ಅಧಿಕಾರ ಕ್ಷೌರಿಕನಿಗೆ" ಎಂದು ಮಾರ್ಮಿಕವಾಗಿ ತಮ್ಮ 'ಕ್ಷೌರ' ಪ್ರಬಂಧದಲ್ಲಿ ವಿಡಂಬಿಸಿದ್ದಾರೆ. ಆದರೆ ಹಳ್ಳಿಯಲ್ಲಿ ಚಾತುರ್ವರ್ಣಾಶ್ರಮದಂತೆ ಅವರವರ ಕೆಲಸಗಳನ್ನು ಅವರವರು ಮಾಡಿಕೊಂಡಿದ್ದರೂ ಕೆಲವರು 'ಮಡಿ'ಯನ್ನೇ ಒಂದು ಕಸುಬನ್ನಾಗಿ

ಆರಿಸಿಕೊಂಡಿದ್ದರು – ಎಂದು 'ಮಡಿ' ಎಂಬ ಪ್ರಬಂಧದಲ್ಲಿ ವ್ಯಂಗ್ಯವಾಡಿದ್ದಾರೆ.

ಹೀಗೆ ಛೇಡಿಸಿದವರು ತಮ್ಮ ಶ್ರೀಮತಿಯವರೊಡನೆ ಅಮೆರಿಕ ಯಾತ್ರೆ ಕೈಗೊಂಡಾಗ ಆದ ಅಚಾತುರ್ಯದಿಂದ ಹೆಂಡತಿಯು ಮನ ನೋಯಿಸದಂತೆ ನಡೆದುಕೊಂಡರೂ ಈ 'ಮಡಿ' ಹೇಗೆ ಬಿಡುವುದಿಲ್ಲವೆನ್ನುವುದನ್ನು ಇನ್ನೂ ರಂಜಿಸಿ ತಮ್ಮ ಅನುಭವಕ್ಕೆ ಹಾಸ್ಯದ ಲೇಪ ಹೊದ್ದಿಸಿದ್ದಾರೆ.

ಅಮೇರಿಕಕ್ಕೆ ಹೋದಾಗ ಅಂದು ನಯಾಗರಾ ಜಲಪಾತವನ್ನು ನೋಡಿಕೊಂಡು ರಾತ್ರಿ ಟೊರಾಂಟೊ ತಲುಪುವ ಯೋಜನೆ ಹಾಕಿಕೊಂಡರು. ರಾತ್ರಿ ದೀಪದ ಅಲಂಕಾರದ ವ್ಯವಸ್ಥೆಯಲ್ಲೊಮ್ಮೆ ನಯಾಗರಾವನ್ನೇಕೆ ನೋಡಬಾರದು ಎಂದು ಅಲ್ಲೇ ಉಳಿದರು. ದೀಪದ ವ್ಯವಸ್ಥೆಯಲ್ಲಿ ನಯಾಗರಾ ನೋಡುವುದೇ ಒಂದು ಚೆಂದ. ಆದರೆ ಹೋಟೆಲಿನ ಕೊಠಡಿ ತೆರವು ಮಾಡಿಬಿಟ್ಟಿದ್ದರಿಂದ ಪುನಃ ನಾಲ್ಕಾರು ಹೋಟೆಲುಗಳಿಗೆ ಹೋಗಿ ವಿಚಾರಿಸಿದರೂ ಕೊಠಡಿಗಳು ದೊರೆಯಲಿಲ್ಲ. ಅಷ್ಟರಲ್ಲಿ ಇವರನ್ನು ಕರೆದೊಯ್ದಿದ್ದ ಟ್ಯಾಕ್ಸಿ ಡ್ರೈವರನೇ ಪುನಃ ಇವರ ಬಳಿ ಬಂದ. "ಟೊರಾಂಟೋಗೆ ಹೋಗುವ ಮಾರ್ಗದಲ್ಲೇ ಒಂದು ಹೋಟೆಲ್ ಇದೆ. ನೀವು ಅಲ್ಲಿ ತಂಗಿದ್ದು ಬೆಳಗ್ಗೆ ಎದ್ದು ಬಸ್ಸಿನಲ್ಲಿ ಟೊರಾಂಟೊ ತಲಪಬಹುದು" ಎಂದು ಸೂಚಿಸಿದ. "ಇಲ್ಲ ಹೀಗೂ ಮಾಡಬಹುದು. ನನ್ನ ಫಾರಂ ಹೌಸ್ ಇಲ್ಲಿಂದ ಕೆಲವೇ ಮೈಲು ದೂರದಲ್ಲಿದೆ. ನೀವು ರಾತ್ರಿ ಇದ್ದು ಹೋಗಬಹುದಲ್ಲ?" ಎಂದು ಸಲಹೆ ನೀಡಿದ.

ಗೊರೂರರಿಗೆ ಎಲ್ಲ ರೀತಿಯ ಭಯವೂ ಪ್ರಾರಂಭವಾಯಿತು. ಇವನು ಯಾರೋ ಏನೋ? ಪ್ರವಾಸಿಗಳ ಹತ್ತಿರ ಹಣವಿದೆ ಎಂದು ಸುಲಿಗೆ ಮಾಡಲು ಈರೀತಿ ಮಾತನಾಡುತ್ತಿದ್ದಾನೆಯೆ? – ಎಂದು ಯೋಚಿಸಿದರು. ಕಡೆಗೆ ಅವನ ಮಾತಿನಲ್ಲಿ ನಂಬಿಕೆ ಬಂದು ಅವನ ಜೊತೆ ಹೊರಟರು. ಫಾರಂ ಹೌಸ್ ಎಂದರೆ ಜೇಡಿಮಣ್ಣಿನಿಂದ ಕೂಡಿದ ಬಂಜರುಭೂಮಿ ಮಧ್ಯದಲ್ಲೊಂದು ಮನೆ ಮಾತ್ರ. "ಮತ್ತೆ ಈ ಬಂಜರುಭೂಮಿಯನ್ನೇಕೆ ಇಟ್ಟುಕೊಂಡಿದ್ದೀಯಾ?"– ಇದು ಗೊರೂರರ ಪ್ರಶ್ನೆ. "ನೋಡಿ, ಮುಂದಿನ ಯೋಜನೆಯ ಪ್ರಕಾರ ನಯಾಗರಾ ಟೌನ್ ಕೆಲಸ ಪ್ರಾರಂಭವಾಗುತ್ತೆ. ಆಗ ಸಿಟಿ ಕೌನ್ಸಿಲ್‌ಗಾಗಿ ಭೂಮಿ ತೆಗೆದುಕೊಳ್ಳುತ್ತಾರೆ. ಆಗ ಜಮೀನಿಗೆ ಒಂದಕ್ಕೆ ನಾಲ್ಕರಷ್ಟು ಹಣ ಬರುತ್ತೆ. ಅದಕ್ಕಾಗಿ ಕಾದಿದ್ದೇನೆ" – ಎಂದ ಟ್ಯಾಕ್ಸಿ ಡ್ರೈವರ್.

ಟ್ಯಾಕ್ಸಿ ಡ್ರೈವರನ ಮನೆ ತಲಪಿದಾಗ ವಯೊಲೆಟ್ (ಡ್ರೈವರನ ಹೆಂಡತಿ) ಬಂದು ಗೊರೂರರ ಸಂಸಾರವನ್ನೆಲ್ಲ ಆತ್ಮೀಯವಾಗಿ ಸ್ವಾಗತಿಸಿ ಒಳಗೆ ಕರೆದೊಯ್ದು ಕಾಫಿ ತಯಾರಿಸಿ ಕೊಟ್ಟಳು. ಆದರೆ ಗೊರೂರರ ಹೆಂಡತಿ ತಮ್ಮ ಬಳಿಯಿದ್ದ

ಲೋಟಕ್ಕೆ ಕಾಫಿಯನ್ನು ಬಗ್ಗಿಸಿಕೊಂಡು ಕುಡಿಯತೊಡಗಿದರು. "ಅದೇಕೆ ಹೀಗೆ ಮಾಡಿದಿರಿ?" ಎಂದಳು ವಯೊಲೆಟ್. ಗೊರೂರರಿಗೆ ಪ್ರಾಣಸಂಕಟ. 'ಮಡಿ' ಎಂಬುದನ್ನು ಹೇಗೆ ವಿವರಿಸುವುದು? ಕಡೆಗೆ 'ಸ್ವಚ್ಛತೆಗಾಗಿ' ಎಂದರಂತೆ. "ಏನು? ನಾವು ಬಿಸಿನೀರಿನಲ್ಲೇ ತೊಳೆದಿದ್ದೇವಲ್ಲ!" – ಎಂದಳು, ಆಕೆ. ಗೊರೂರರು ತಮ್ಮ ಶಬ್ದಭಂಡಾರವನ್ನೆಲ್ಲಾ ಹುಡುಕಿದರೂ ಮಡಿಗೆ ಸಮಾನಾರ್ಥ ಬರುವಂತೆ ಹೇಳಲಾಗದೆ ಕಡೆಗೆ, "ಅದು ಅವಳ ಸ್ವಂತ ಪಾತ್ರೆ– ಅದರಲ್ಲಿ ಕುಡಿದರೇ ಅವಳಿಗೆ ಒಂದು ರೀತಿಯ ಭಾವನಾತ್ಮಕ ತೃಪ್ತಿ" ಎಂದರಂತೆ. ಗೊರೂರರು ತಮ್ಮ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಕೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಕಡೆಗೆ ಗುಜರಾತ್ ತಲುಪಿ ವಿದ್ಯಾಪೀಠದಲ್ಲಿ ವಿದ್ಯಾರ್ಜನೆ ಮಾಡಿ, ಗಾಂಧೀಜೀಯವರಿಂದ ಎಷ್ಟು ಪ್ರೇರಿತರಾಗಿದ್ದರೆಂದರೆ, "ಗಾಂಧೀಜೀ ನನ್ನ ಹೃದಯದಲ್ಲಿಯೇ ಕುಳಿತದ್ದ ಜ್ಯೋತಿಯಾಗಿದ್ದರು. ನಾನು ಪ್ರತಿಯೊಂದು ಕಾರ್ಯ ಮಾಡುವಾಗಲೂ 'ಗಾಂಧೀಜೀ ಇದಕ್ಕೆ ಏನು ಹೇಳಬಹುದು?' ಎಂದು ಯೋಚಿಸುತ್ತಿದ್ದೆ" ಎಂದು ಹೇಳಿಕೊಂಡಿದ್ದಾರೆ. ಹೀಗೆ ಅಪ್ಪಟ ಗಾಂಧೀವಾದಿಯಾಗಿ ಬೆಂಗಳೂರಿಗೆ ಬಂದು ಕೆಂಗೇರಿಯ ಬಳಿಯ ಗುರುಕುಲಾಶ್ರಮ ಸೇರಿದ ನಂತರ 'ಅಖಿಲ ಭಾರತ ಚರಖಾ ಸಂಘದ ಖಾದಿ ವಸ್ತ್ರಾಲಯ'ದ ಜವಾಬ್ದಾರಿ ವಹಿಸಿಕೊಂಡರು.

ಒಮ್ಮೆ ಆ ವಸ್ತ್ರಾಲಯಕ್ಕೆ ಖಾದಿ ಧರಿಸಿದ್ದ ವಯಸ್ಸಾದ ಗಂಭೀರ ಮುಖಮುದ್ರೆಯ ಗೃಹಸ್ಥರೊಬ್ಬರು ಬಂದರು. ಬಂದವರು ಖಾದಿ ಕೊಳ್ಳಲೆಂದೇ ಬಂದಿದ್ದಾರೆಂದು ಗೊರೂರರು ಅವರ ಮುಂದೆ ಉತ್ಸಾಹದಿಂದಲೇ ಖಾದಿ ಬಟ್ಟೆಗಳನ್ನು ಹರಡಿದರು. ಆತ "ಇದಕ್ಕಿಂತ ನವಿರಾದ ವಸ್ತ್ರವಿದೆಯೆ?" ಎಂದಾಗ ಗೊರೂರರು "ಓಹೋ! ಅದಕ್ಕೇನಂತೆ ೮೦ ನೇ ನಂಬರ್ ನೂಲಿನಿಂದ ಹಿಡಿದು ೧೦೦ನೇ ನಂಬರ್ ನೂಲಿನತನಕವೂ ಇದೆ"(ಉತ್ಕೃಷ್ಟ ಖಾದಿಯನ್ನು ನಂಬರ್–ಕೌಂಟ್–ನಿಂದ ಗುರುತಿಸುತ್ತಿದ್ದ ರೀತಿ)ಎಂದು ಮತ್ತೊಂದು ಖಾದಿ ವಸ್ತ್ರ ಹರವಿದರು."ಇದು ೪೦ನೇ ನಂಬರ್ ಖಾದಿ"ಎಂದರು ಆತ. "ಯಾರು ಸ್ವಾಮಿ ಹೇಳಿದ್ದು? ಇದು ೧೦೦ನೇ ನಂಬರು ನೂಲಿನ ಬಟ್ಟೆ. ಇನ್ನೂರು ಮುನ್ನೂರು ಕೌಂಟಿನದು ಕೂಡಾ ಇದೆ" ಎಂದು ಗಿರಾಕಿಯ ಮನವೊಲಿಸಲು ವ್ಯಾಪಾರಿ ಬುದ್ಧಿ ತೋರಿಸಿದರು ಗೊರೂರರು. "ಯಾರು ಸ್ವಾಮಿ ನಿಮಗೆ ಹೇಳಿದ್ದು ಇದು ೧೦೦ನೇ ನಂಬರಿನ ನೂಲಿನದೆಂದು? ಇದು ೪೦ನೇ ನಂಬರ್ ನೂಲಿನದು" ಎಂದರು ಆತ ಮತ್ತೊಮ್ಮೆ. "ಛೇ, ಎಲ್ಲಾದರೂ ಉಂಟೇ! ಇದು ದೇಶಭಕ್ತರಾದ ಕೊಂಡಾವೆಂಕಪ್ಪಯ್ಯನವರ ಕೇಂದ್ರದಿಂದ ತರಿಸಿದ ಖಾದಿ"ಎಂದರು ಗೊರೂರರು.

"ಆ ರೀತಿ ಅವರು ನಿಮಗೆ ಹೇಳಿದರೆ?" "ಹೌದು ಸ್ವಾಮಿ, ನೂರು ನೂರು ಸಲ ಹೇಳಿದ್ದಾರೆ." "ಹಾಗಾದರೆ ನೀವು ಕೊಂಡಾವೆಂಕಪ್ಪಯ್ಯನವರನ್ನು ನೋಡಿದ್ದೀರಾ?" " ಏನು ಸ್ವಾಮಿ, ನೋಡದೆ ಉಂಟೇ? ಖಾದಿ ಕಾರ್ಯಕರ್ತರೆಲ್ಲ ನೋಡೇ ಇರ್ತಾರೆ" ಎಂದೆನ್ನುತ್ತಾ ಗೊರೂರರು ಮತ್ತೊಬ್ಬ ಗಿರಾಕಿಗೆ ಬಟ್ಟೆ ಕೊಟ್ಟು ಇತ್ತ ತಿರುಗಿದಾಗ ಬಾಗಿಲ ಹತ್ತಿರ ನಿಂತ ಆತ "ನಾನೇ ಕೊಡಾವೆಂಕಪ್ಪಯ್ಯ" ಎಂದಾಗ ಗೊರೂರರಿಗೆ ಹೃದಯ ಬಾಯಿಗೆ ಬಂದ ಹಾಗಾಯಿತಂತೆ.

ಗೊರೂರರಿಗೆ ಹೀಗೆ ಆ ಖಾದಿ ವಸ್ತ್ರಾಲಯಕ್ಕೆ ಬರುತ್ತಿದ್ದ ಹಲವರ ಪರಿಚಯವಾಗಿದ್ದೇ ಮುಂದೆ ಅವರ ಸಾಹಿತ್ಯ ಪ್ರಚಾರಕ್ಕೂ ಅನುವು ಮಾಡಿಕೊಟ್ಟಿತು. ಅಪ್ಪಟ ದೇಶಪ್ರೇಮಿಯಾದ ಗೊರೂರರನ್ನು ಸ್ವಾತಂತ್ರ್ಯ ಹೋರಾಟಕ್ಕೂ ಅದು ಎಳೆದು ತಂದಿತು. ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿದಾಗ ಇವರ ಬಂಧನವಾಯಿತು. ಆ ಸಂದರ್ಭದಲ್ಲೇ ಇವರ ತಾಯಿಯ ಎಂಟನೇ ತಿಂಗಳ ಶ್ರಾದ್ಧದ ಸಮಯ. ಹೀಗೆ ಬಂಧಿತರಾದ ಗೊರೂರರು ೧೪ ತಿಂಗಳಕಾಲ ಹಾಸನ, ಶಿವಮೊಗ್ಗ, ಸಾಗರ,ಬೆಂಗಳೂರು ಸೆರೆಮನೆಗಳಲ್ಲಿ ಕಾಲಕಳೆಯಬೇಕಾಯಿತು. ಇವರು ಸೆರೆಮನೆಯಲ್ಲಿರುವಾಗಲೇ 'ಹಳ್ಳಿಯ ಬಾಳು' ಅಚ್ಚಾಗುತ್ತಿತ್ತು. ಇವರು 'ಮಲೆನಾಡರು'(ಕಾಸೆಕ್ಸ್ ಕಾದಂಬರಿ-ಟಾಲ್‌ಸ್ಟಾಯ್) ಅನುವಾದಿಸಿದ್ದು ಸೆರೆಮನೆಯಲ್ಲಿಯೇ.

೧೯೪೭ರಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಮೈಸೂರು ಸಂಸ್ಥಾನದಲ್ಲಿ ನಡೆದ ಹೋರಾಟದಲ್ಲಿ ಗೊರೂರರ ಹಿರಿಯ ಮಗ ೧೭ ವರ್ಷದ ರಾಮಚಂದ್ರ ತುಮಕೂರಿನಲ್ಲಿ ಪೋಲೀಸರ ಗುಂಡಿಗೆ ಆಹುತಿಯಾಗಬೇಕಾಯಿತು.

೧೯೩೦ರಲ್ಲಿ ಪ್ರಕಟಗೊಂಡ ಇವರ 'ಹಳ್ಳಿಯ ಚಿತ್ರಗಳು' ಬರಹದಿಂದ ಹಿಡಿದು ಇವರು ಸಾಹಿತ್ಯದ ವಿವಿಧ ಪ್ರಾಕಾರಗಳಿಗೆ ತಮ್ಮದೇ ಆದ ಅಮೋಘ ಕೊಡುಗೆ ನೀಡಿದರು.

ಗೊರೂರರ ಸಣ್ಣಕಥೆಗಳಲ್ಲಿ ಹೆಚ್ಚಿನ ಕಲೆಗಾರಿಕೆ, ಆಧುನಿಕ ಸಂವೇದನೆ, ಬಿಗಿಯಾದ ಬಂಧ, ಸೂಕ್ಷ್ಮತೆ, ಸಂಕೇತ-ಪ್ರತಿಮೆಗಳ ಬಳಕೆ ಇಲ್ಲದಿರಬಹುದು. ಆದರೆ ಇವರ ಮೌಲ್ಯನಿಷ್ಠೆ, ಬದ್ಧತೆ ಯಾರಿಗಾದರೂ ಅರ್ಥವಾದೀತು.

ಇವರ ಪ್ರಬಂಧಗಳಲ್ಲಿ ಹಳ್ಳಿಯ ಸಮಸ್ತರೂ ಜಾಗ ಪಡೆದುಕೊಳ್ಳುತ್ತಾರೆ. ಹಾರುವ, ಹೊಲೆಯ, ಒಕ್ಕಲಿಗ, ಬೆಸ್ತ, ಅಗಸ, ಮುಸಲ್ಮಾನ ಮುಂತಾದ ನಾನಾ ಜನಾಂಗಗಳ ಬದುಕಿನಲ್ಲಿ ಹಾಸುಹೊಕ್ಕಾಗಿರುವ ವೈಚಿತ್ರ್ಯಗಳಿಗೆ ಪಕ್ಷಪಾತವಿಲ್ಲದೆ ಕನ್ನಡಿ ಹಿಡಿದಿದ್ದಾರೆ. ಅವರಲ್ಲಿರುವ ಅಜ್ಞಾನ, ಅವಿವೇಕ, ಸ್ವಾರ್ಥತೆ, ಸಂಕುಚಿತ ಮನೋಭಾವನೆ, ಹೀನ ಪ್ರವೃತ್ತಿ ಮೊದಲಾದ ದೌರ್ಬಲ್ಯಗಳನ್ನು ಮಾರ್ಮಿಕವಾಗಿ

ವಿಡಂಬಿಸಿದ್ದಾರೆ.

ಕಾದಂಬರಿಯಲ್ಲೂ ಅಷ್ಟೇ. ಹೇಮಾವತಿ ನದಿಯನ್ನೇ ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿಸಿಕೊಂಡು ತಮ್ಮ ಸಾಹಿತ್ಯಕೃಷಿಯ ಬಹುಪಾಲು ಉಸಿರಾಟವನ್ನು ಹೇಮಾವತಿ ನದಿಗೆ ಮೀಸಲಾಗಿಸಿ ತಮ್ಮ ಬದುಕಿಗೂ, ಬರಹಕ್ಕೂ, ಹೇಮಾವತಿ ನದಿಗೂ ಕಲ್ಪಿಸಿದ ಅವಿನಾಭಾವ ಸಂಬಂಧ ಅನನ್ಯ.

ಬಾಳನ್ನು ಹಸನುಮಾಡುವ ಮಾನವಪ್ರೇಮ, ವಿಶ್ವಾಸ, ಕುಟುಂಬ ಜೀವನ, ನೆಮ್ಮದಿ ಮುಂತಾದ ಮೌಲ್ಯಗಳಿಗೆ ಗೊರೂರರು ನೀಡುತ್ತಿದ್ದ ಪ್ರಾಶಸ್ತ್ಯ ಎಷ್ಟೆಂಬುದು ಅವರು ಆರಿಸಿಕೊಂಡಿದ್ದ ಅನುವಾದಗಳಲ್ಲಿಯೂ ಪ್ರತಿಬಿಂಬಿತವಾಗಿದೆ.

ನಾನಾ ಪ್ರಕಾರಗಳಲ್ಲಿ ದುಡಿದು ಗೊರೂರರು ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದರು. ೧೯೫೨ರಲ್ಲಿ ಕೆಂಗಲ್ ಹನುಮಂತಯ್ಯನವರು ಗೊರೂರರನ್ನು ವಿಧಾನ ಪರಿಷತ್ತಿಗೆ ಸದಸ್ಯರನ್ನಾಗಿ ನಾಮಕರಣ ಮಾಡಿ ಸಾಹಿತ್ಯಕ್ಕೆ, ಗೊರೂರರಿಗೆ ಗೌರವ ಸಲ್ಲಿಸಿದರೆ, ಇನ್ನೊಂದು ಬಾರಿ ವಿಧಾನ ಪರಿಷತ್ತಿಗೆ ನಿಜಲಿಂಗಪ್ಪನವರು ನಾಮಕರಣ ಮಾಡಿ ಗೌರವಿಸಿದರು.

ಪ್ರಶಸ್ತಿಗೆ ಎಂದೂ ಆಸೆಪಡದ ಗೊರೂರರನ್ನು ಪ್ರಶಸ್ತಿಗಳು ತಾವೇ ಹುಡುಕಿಕೊಂಡು ಬಂದವು.೧೯೬೭ರಲ್ಲಿ ತರೀಕೆರೆಯಲ್ಲಿ ನಡೆದ ಪ್ರಪ್ರಥಮ ಅಖಿಲ ಕರ್ನಾಟಕ ಜನಪದ ಸಮ್ಮೇಳನದ ಅಧ್ಯಕ್ಷತೆ; ೧೯೬೯ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ; ೧೯೭೧ರಲ್ಲಿ ಹಾಸನ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ; ೧೯೭೪ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟೊರೇಟ್; ೧೯೮೦ರಲ್ಲಿ 'ಅಮೆರಿಕದಲ್ಲಿ ಗೊರೂರು' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ; ೧೯೮೨ರಲ್ಲಿ ಶಿರಸಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ-ಇದು ಹಾಸ್ಯ ಬರಹಕ್ಕೆ ಸಂದ ಮೊದಲ ಮರ್ಯಾದೆ- ಹೀಗೆ ಹಲವಾರು ಗೌರವಗಳು ಅವರಿಗೆ ಸಂದವು.

ಎಲ್ಲರನ್ನೂ ನಕ್ಕು ನಗಿಸುವ ವಿಶಿಷ್ಟ ಸಾಹಿತ್ಯ ಪ್ರಕಾರವೊಂದನ್ನು ಸೃಷ್ಟಿಸಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ-ವಿಸ್ತಾರಗಳನ್ನು, ವೈವಿಧ್ಯ-ವೈಶಿಷ್ಟ್ಯಗಳನ್ನು ಉಸಿರಿರುವವರೆಗೂ (೨೮-೯-೧೯೯೧) ತಂದುಕೊಟ್ಟು ಸುಮಾರು ಅರ್ಧಶತಮಾನದ ಕಾಲಾವಧಿಯಲ್ಲಿ ಅವರು ರಚಿಸಿದ ಗ್ರಂಥಗಳು ಒಟ್ಟು ೪೫ಕ್ಕೂ ಹೆಚ್ಚು. ಸಣ್ಣಕಥೆ, ಪ್ರಬಂಧ, ಕಾದಂಬರಿ, ಅನುವಾದ, ಜೀವನಚರಿತ್ರೆ, ವ್ಯಕ್ತಿ ಪರಿಚಯ, ಪ್ರವಾಸ ಸಾಹಿತ್ಯ- ಮುಂತಾದವುಗಳಿಂದ ಅಸಂಖ್ಯಾತ ಓದುಗರ ಮನಗೆದ್ದ ಗೊರೂರರ ಸಾಹಿತ್ಯ ಅನನ್ಯ.

(ಸಾಭಾರ- ಉತ್ಥಾನ.)

ಜನಪದ ನಿಲಯದ ಅಂತರಂಗದಲ್ಲಿ......... ೧೫



೧೯೬೦ ಆಗಸ್ಟ್ ೧೨ ರಂದು ಜನಪದ ಟ್ರಸ್ಟಿನ ಸ್ಥಾಪನೆಯಾಯಿತೆಂದು ತಿಳಿಸಲಾಗಿದೆ. ಆದರೆ ಈ ದಿನಾಂಕದಂದೇ, ಈ ವರ್ಷದಂದೇ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಯಾವುದೇ ಪಂಚಾಂಗಾಧಾರಿತ ಕಾರಣಗಳಿಲ್ಲ. ಎಲ್ಲವೂ ಸರ್ವೋದಯ ಆಂದೋಲನದ ಭಾಗವಾಗಿ ಸಹಜವಾಗಿ ನಡೆಯಿತು. ಮೇಲುಕೋಟೆಯಲ್ಲಿ ಏಕಾಂಗಿಯಾಗಿ ಶಕ್ತ್ಯಾನುಸಾರ, ಪರಿಸ್ಥಿತಿಗನುಸಾರ ಕೆಲ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದೆನಷ್ಟೆ. ಅದೇ ಸಮಯದಲ್ಲಿ ನಾನು ಆಗಾಗ ಮೈಸೂರಿಗೆ ಹೋಗಿಬರುತ್ತಿದ್ದುದೂ ಇತ್ತು. ಏಕೆಂದರೆ ಮೈಸೂರು ನಗರದಲ್ಲಿಯೆ ಸಮಾನಮನಸ್ಕರಾದ ಹಾಗೂ ಹಿರಿಯರಾದ ಹಲವಾರು ಸ್ನೇಹಿತರು ಇದ್ದರು. ಅವರೊಂದಿಗಿನ ಒಡನಾಟ ನನಗೆ ಖುಷಿ ತಂದುಕೊಡುತ್ತಿತ್ತು. ಆ ಸಮಯದಲ್ಲಿಯೆ ಮೈಸೂರಿನಲ್ಲಿ ಐತಿಹಾಸಿಕವಾಗಿ ಮಹತ್ವವಾದ ಒಂದು ಸಂಸ್ಥೆ ಹುಟ್ಟಿಕೊಂಡಿತ್ತು. ಅದೇ ಗಾಂಧೀ ವಿಚಾರ ಗ್ರಂಥ ಮಾಲೆ. ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿರುವ ಅಪಾರವಾದ ಗಾಂಧೀ ಸಾಹಿತ್ಯವನ್ನು ಕನ್ನಡಕ್ಕೆ ತರುವ ಮಹತ್ತರವಾದ ಕೆಲಸವನ್ನು ಈ ಗ್ರಂತಮಾಲೆ ಕೈಗೆತ್ತಿಕೊಂಡಿತ್ತು. ಇದರ ಕಚೇರಿ ರಮಾವಿಲಾಸ ರಸ್ತೆಯಲ್ಲಿಯ ಅಂಬಳೆ ಅಯ್ಯರ್ ಅವರ ಹಳೆಯದಾದ ಆದರೆ ಬಲು ಸುಭದ್ರವಾದ ಹಾಗೂ ಸಂಸ್ಕೃತಿಯ ಪರಂಪರೆಯುಳ್ಳಂಥ ಮನೆ ಅದಾಗಿತ್ತು. ಆ ಮನೆಯ ಪೂರ್ವಿಕರಿಗೂ ಮೈಸೂರಿನ ಅರಮನೆಗೂ ಸಂಬಂಧವಿತ್ತು. ಆದ್ದರಿಂದಲೇ ಏನೋ ಅಂಬಳೆಯವರ ಮನೆ ಕಲಾತ್ಮಕವೂ, ಭವ್ಯವೂ ಆಗಿತ್ತು. ಇಂಥ ಮನೆಯ ಮಹಡಿಯ ಮೇಲೆ ಗ್ರಂಥಮಾಲೆಯ ಕಚೇರಿ ಇತ್ತು. ರಮಾವಿಲಾಸ ರಸ್ತೆ ಆಗ ಬಹಳ ನಿರ್ಜನವಾಗಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಮೈಸೂರು ನಗರದ ವೈಶಿಷ್ಟ್ಯವನ್ನು ಸಾರುವಂಥ ಹಳೆಯ ಮಾದರಿಯ ವಿದ್ಯುತ್ ದೀಪದ ಸಾಲು ಕಂಬಗಳಿದ್ದವು. ಈ ಕಾರ್ಯಾಲಯದ ಹೊರಭಾಗದಲ್ಲಿ ಒಂದು ವಿಶಾಲವಾದ ಹಜಾರ ಇತ್ತು. ಅಲ್ಲಿ ಯಾವಾಗಲೂ ಖಾದಿ ಜಮಖಾನವು ಹಾಸಿರುತ್ತಿತ್ತು. ಮರದ ಮೆಟ್ಟಿಲುಗಳುಳ್ಳ ಮಹಡಿಯನ್ನು ಹತ್ತಿ ಈ ಹಜಾರವನ್ನು ಪ್ರವೇಶಿಸುವ ಮುನ್ನ ಎಡಭಾಗದಲ್ಲಿ ಒಂದು ಕೋಣೆ ಇತ್ತು. ನಾನು ಮೈಸೂರಿಗೆ ಹೋದಾಗಲೆಲ್ಲ ಸಾಮಾನ್ಯವಾಗಿ ಈ ಮನೆಯಲ್ಲಿಯೇ ತಂಗುತ್ತಿದ್ದೆ. ಏಕೆಂದರೆ ನನಗೆ ಆಗ ಮೈಸೂರಿನಲ್ಲಿ ನಿಕಟ ಪರಿಚಯವುಳ್ಳ ಸ್ನೇಹಿತರಾಗಲೀ, ಬಂಧುಗಳಾಗಲೀ ಇರಲಿಲ್ಲ. ಈ ಗ್ರಂಥಮಾಲೆಯ ಗಾಂಧೀ ಸಾಹಿತ್ಯ ಪ್ರಕಟಣೆಗೆ ಕೇಂದ್ರ ಗಾಂಧೀ ಸ್ಮಾರಕ ನಿಧಿ

ಧನಸಹಾಯ ಮಾಡುತ್ತಿತ್ತು. ಭಾರತದ ಎಲ್ಲ ಭಾಷೆಗಳಲ್ಲಿಯೂ ಗಾಂಧೀಸಾಹಿತ್ಯವನ್ನು ತರ್ಜುಮೆ ಮಾಡಿಸಬೇಕೆಂಬ ಉದ್ದೇಶವನ್ನು ನಿಧಿಹೊಂದಿತ್ತು. ಆ ಕಾರ್ಯಕ್ರಮದ ಅಡಿಯಲ್ಲಿ ಕನ್ನಡಕ್ಕೂ ಗಾಂಧೀ ಸಾಹಿತ್ಯವನ್ನು ತರುವ ಹೊಣೆ ಕರ್ನಾಟಕ ರಾಜ್ಯ ಗಾಂಧೀ ಸ್ಮಾರಕ ನಿಧಿಯ ಮೇಲಿತ್ತು. ಗಾಂಧೀ ಸಾಹಿತ್ಯದ ಈ ಕೆಲಸಕ್ಕಾಗಿ ರಾಜ್ಯ ಗಾಂಧೀ ಸ್ಮಾರಕ ನಿಧಿಯು ಪ್ರತ್ಯೇಕವಾದ ಒಂದು ಸಮಿತಿಯನ್ನೇ ರಚಿಸಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಿತ್ತು. ಅಖಿಲ ಭಾರತ ಗಾಂಧೀ ಸ್ಮಾರಕ ನಿಧಿಗೆ ಶ್ರೀ ಆರ್. ಆರ್. ದಿವಾಕರ್ ಅಧ್ಯಕ್ಷರಾಗಿದ್ದರು. ದಿವಾಕರ್ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದವರು. ಕಾರಾಗೃಹವಾಸವನ್ನೂ ಅನುಭವಿಸಿದ್ದವರು. ಉತ್ತರ ಕರ್ನಾಟಕದಲ್ಲಿ ದಿವಾಕರರ ಹೆಸರು ಮನೆಮಾತಾಗಿತ್ತು. ಇವರೊಂದಿಗೆ ಇನ್ನಿಬ್ಬರು ಮಹನೀಯರ ಹೆಸರುಗಳೂ ಸಹ ಅಷ್ಟೇ ಪ್ರಸಿದ್ಧವಾಗಿದ್ದವು. ಅವು ಡಿ. ಪಿ. ಕರ್ಮರ್ಕರ್ ಮತ್ತು ಎನ್. ಎಸ್. ಹರ್ಡಿಕರ್. ಹೀಗೆ ದಿವಾಕರ್, ಹರ್ಡಿಕರ್ ಮತ್ತು ಕರ್ಮರ್ಕರ್ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗಿಯಾಗಿ ಉತ್ತರ ಕರ್ನಾಟಕದ ಕಣ್ಮಣಿಯಾಗಿದ್ದರು. ಸ್ವಾತಂತ್ರ್ಯ ಬಂದ ಮೇಲೆ ಕರ್ಮರ್ಕರ್ ನೆಹರೂರವರ ಸರ್ಕಾರದಲ್ಲಿ ಆರೋಗ್ಯ ಮಂತ್ರಿಯಾದರು, ದಿವಾಕರ್ ವಾರ್ತಾ ಮಂತ್ರಿಗಳಾದರು ಮತ್ತು ಹರ್ಡೀಕರ್ ಹಿಂದುಸ್ತಾನಿ ಸೇವಾದಳವನ್ನು ಸ್ಥಾಪಿಸಿ ಪ್ರಸಿದ್ಧರಾದರು. ದಿವಾಕರರು ಬಿಹಾರ ರಾಜ್ಯದ ರಾಜ್ಯಪಾಲರಾಗಿಯೂ ಕೆಲಸಮಾಡಿದರು. ದಿವಾಕರ್ ಬಹಳವಿಚಾರವಂತ ವ್ಯಕ್ತಿಯಾಗಿದ್ದರು. ಆಧ್ಯಾತ್ಮಿಕತೆಯಕಡೆಗೆ ತುಂಬಾ ಒಲವುಳ್ಳವರಾಗಿದ್ದರು. ಇವರು ಕಾರಾಗೃಹದಲ್ಲಿದ್ದಾಗ ಅನೇಕ ಪುಸ್ತಕಗಳನ್ನು ಬರೆದರು. ಅವುಗಳಲ್ಲಿ ಅವರು ಬರೆದ "ಅಂತರಾತ್ಮನಿಗೆ" ಎಂಬ ಪುಸ್ತಕ ಬಹಳ ಜನಪ್ರಿಯವಾಯಿತು. ಇಂದಿಗೂ ಸಹದೊಂದು ಆಧ್ಯಾತ್ಮಿಕ ಪ್ರಿಯರಿಗೆ ಮೆಚ್ಚುಗೆಯಾಗುವಂಥ ಪುಸ್ತಕವಾಗಿದೆ. ಕ್ರಮೇಣ ಅವರು ಪತ್ರಿಕಾರಂಗಕ್ಕೂ ಬಂದರು. ಸಂಯುಕ್ತ ಕರ್ನಾಟಕ ಎಂಬ ದಿನಪತ್ರಿಕೆಯನ್ನೂ, ಕರ್ಮವೀರ ಎಂಬ ವಾರ ಪತ್ರಿಕೆಯನ್ನೂ ಪ್ರಕಟಿಸಿದರು. ಈ ಎರಡೂ ಪತ್ರಿಕೆಗಳು ಇಂದಿಗೂ ರಾಷ್ಟ್ರೀಯ ಪತ್ರಿಕೆಗಳಾಗಿ ಕನ್ನಡಿಗರ ಗೌರವಾದರಗಳಿಗೆ ಪಾತ್ರವಾಗಿವೆ. ದಿವಾಕರರಿಗೆ ಕನ್ನಡ ಭಾಷೆಯ ಬಗ್ಗೆಯೂ ಅಪಾರವಾದ ಪ್ರೇಮವಿತ್ತು. ಗಾಂಧೀಜಿಯವರ ವಿಚಾರಗಳಿಂದ ಬಹಳ ಪ್ರಭಾವಿತರಾಗಿದ್ದ ದಿವಾಕರರು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದುದು ಸಹಜವೂ ಯೋಗ್ಯವೂ ಆಗಿತ್ತು. ಅವರು ಕನ್ನಡದಲ್ಲಿ ಗಾಂಧೀ ಸಾಹಿತ್ಯವನ್ನು ತರಲು ಉದ್ಯುಕ್ತರಾದುದು ಆಶ್ಚರ್ಯವೇನಲ್ಲ. ಈ ಗ್ರಂಥಮಾಲೆಯ ಸಂಪಾದಕ ಮಂಡಳಿಗೆ ಆಗ ಸುಪ್ರಸಿದ್ಧ ಗಾಂಧೀ ವಿಚಾರ ಪ್ರೇಮಿಗಳನ್ನು ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು. ಈ ಸಂಪಾದಕರ ಸಮಿತಿಗೆ ಪ್ರಧಾನ ಸಂಪಾದಕರಾಗಿ ಪ್ರೊ. ಎಂ. ಯಾಮುನಾಚಾರ್ಯರು ನಿಯುಕ್ತಿಗೊಂಡಿದ್ದರು. ಯಾಮುನಾಚಾರ್ಯರು ಭಾರತೀಯ ತತ್ವಶಾಸ್ತ್ರದಲ್ಲಿ ಉದ್ದಾಮ ಪಂಡಿತರಾಗಿದ್ದರು. ತತ್ವ ಸಿದ್ಧಾಂತದ

ಹಿರಿಯ ಚಿಂತಕರಾಗಿದ್ದ ಪ್ರೊ. ಎಸ್. ರಾಧಾಕೃಷ್ಣನ್‌ರವರ ವಿದ್ಯಾರ್ಥಿಯಾಗಿದ್ದರು. ಪ್ರೊ. ಯಾಮುನಾಚಾರ್ಯರಲ್ಲದೆ ಈ ಸಂಪಾದಕ ಮಂಡಳಿಯಲ್ಲಿ ಶ್ರೀ ಖಾದ್ರಿ ಶಾಮಣ್ಣ, ಪ್ರೊ. ಬಿ. ಆರ್. ಪ್ರಾಣೇಶ್‌ರಾವ್, ಶ್ರೀ ಜಿ. ವಿ. ನಾರಾಯಣ ಮೂರ್ತಿ, ಶ್ರೀ ಕೆ. ಎಸ್. ನಾರಾಯಣ ಸ್ವಾಮಿ, ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಶ್ರೀ ರಾಮಚಂದ್ರ ವಡವಿ, ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ ಮುಂತಾದ ಗಣ್ಯರಿದ್ದರು. ಸಂಪಾದಕ ಮಂಡಳಿಯ ಸಭೆ ನಡೆದಾಗಲೆಲ್ಲ ಈ ಎಲ್ಲ ಸದಸ್ಯರು ಏಕತ್ರಿತರಾಗುತ್ತಿದ್ದರು. ಅಂಥ ಸಮಯದಲ್ಲೆಲ್ಲಾ ನಾನೂ ಕೂಡಾ ಅಲ್ಲಿ ಇರುವಂಥ ಅವಕಾಶ ನನಗೆ ಆಗಾಗ್ಯೆ ದೊರೆಯುತ್ತಿತ್ತು. ಆ ಎಲ್ಲ ಹಿರಿಯ ಮಹನೀಯರು, ವದ್ವಾಂಸರು, ಸಾಹಿತಿಗಳು ಸೇರಿದ ಸಮಯ ಒಂದು ಅಭೂತಪೂರ್ವವಾದ ಸನ್ನಿವೇಶವಾಗಿರುತ್ತಿತ್ತು. ಅವರವರಲ್ಲಿ ಅನೇಕ ತಾರ್ಕಿಕ ಸಂಭಾಷಣೆಗಳು ನಡೆಯುತ್ತಿದ್ದವು. ಅದನ್ನೆಲ್ಲಾ ಕೇಳಿ ಸಂತೋಷಪಡುವ ಭಾಗ್ಯ ನನ್ನದಾಗಿರುತ್ತಿತ್ತು. ಅಲ್ಲದೆ ಅವರೊಂದಿಗೆ ನಿಕಟವಾಗಿ ಪರಿಚಿತನಾಗುವ ಅವಕಾಶ ದೊರೆಯುತ್ತಿತ್ತು. ಸಲಹಾ ಸಮಿತಿಯ ಸಭೆಗೆಂದು ಮೈಸೂರಿಗೆ ಬಂದ ಈ ಎಲ್ಲ ಹಿರಿಯ ಚೇತನಗಳನ್ನು ಯಾಮುನಾಚಾರ್ಯರು ತಮ್ಮ ಮನೆಗೆ ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಆ ಹೊತ್ತಿಗೆ ಯಾಮುನಾಚಾರ್ಯರೊಂದಿಗೆ ನನ್ನ ಪರಿಚಯವಾಗಿತ್ತು. ಅವರು ನನ್ನನ್ನು ಬಹಳ ವಿಶ್ವಾಸದಿಂದಲೂ, ಪ್ರೇಮಭಾವನೆಯಿಂದಲೂ ಕಾಣುತ್ತಿದ್ದರು. ಆದ್ದರಿಂದ ಎಲ್ಲ ಹಿರಿಯರನ್ನು ಊಟಕ್ಕೆ ಆಹ್ವಾನಿಸಿದಾಗ ನನ್ನನ್ನೂ ಕರೆಯಲು ಮರೆಯುತ್ತಿರಲಿಲ್ಲ. ಅವರೆಲ್ಲರ ಸಹವಾಸವನ್ನು ಯಾವಾಗಲೂ ಬಯಸುತ್ತಿದ್ದ ನನಗೆ ಯಾಮುನಾಚಾರ್ಯರ ಆಹ್ವಾನವು ಎಲ್ಲಿಲ್ಲದ ಸಂತೋಷವನ್ನುಂಟು ಮಾಡುತ್ತಿತ್ತು ಮತ್ತು ನನ್ನ ವ್ಯಕ್ತಿತ್ವದ ಬೆಳವಣಿಗೆಗೆ ನೆರವಾಗುತ್ತಿತ್ತು. ಯಾಮುನಾಚಾರ್ಯರು ತಮ್ಮ ಮನೆಗೆ "ವೇದ ಗೃಹ" ಎಂಬುದಾಗಿ ನಾಮಕರಣ ಮಾಡಿದ್ದರು. ಈ ಎಲ್ಲ ಹಿರಿಯರು ಆ ಮನೆಯೊಳಗೆ ಪ್ರವೇಶಿಸಿ ಬಹಳ ಸ್ನೇಹಪೂರ್ಣ ವಾತಾವರಣದಲ್ಲಿ ಆತ್ಮೀಯವಾಗಿ ಚರ್ಚೆ ನಡೆಸುತ್ತಿದ್ದಾಗ ಆ ಮನೆಯ ಹೆಸರು ಸಾರ್ಥಕವೆನಿಸುತ್ತಿತ್ತು.

ಹೀಗೆ ಸರ್ವೋದಯ ಆಂದೋಲನದಿಂದ ಪ್ರಭಾವಿತನಾಗಿ ಮೇಲುಕೋಟೆಗೆ ಬಂದು ನೆಲಸಿದ ಹೊಸತರಲ್ಲಿಯೇ ಗಾಂಧೀ ಸಾಹಿತ್ಯ ಗ್ರಂಥಮಾಲೆಯ ಎಲ್ಲ ಹೆಸರಾಂತ ವ್ಯಕ್ತಿಗಳ ಪರಿಚಯವಾದದ್ದು ನನ್ನ ಜೀವನದಲ್ಲಿಯ ಒಂದು ವಿಶೇಷ ಸಂಗತಿಯೇ ಆಗಿತ್ತು ಮತ್ತು ಸರ್ವೋದಯ ಆಂದೋಲನದಲ್ಲಿ ಮುಂದುವರೆಯಬೇಕೆಂಬ ನನ್ನ ಸಂಕಲ್ಪಕ್ಕೆ ದೃಢತೆಯನ್ನು ತಂದುಕೊಟ್ಟಿತ್ತು.

(ಮುಂದುವರೆಯುವುದು.............)

ಸಂತಾಪ

ಹೆಸರಾಂತ ಗಾಂಧಿ ಸಿದ್ಧಾಂತ ಅನುಯಾಯಿಗಳು, ಶಿಕ್ಷಣತಜ್ಞರೂ ಮತ್ತು ವಿಚಾರಶೀಲರೂ ಆಗಿದ್ದ ಶ್ರೀ ಹೆಚ್. ನರಸಿಂಹಯ್ಯನವರು ದಿವಂಗತರಾದುದಕ್ಕೆ ಜನಪದ ವಿಚಾರವು ತನ್ನ ಅಂತಃಕರಣಪೂರಿತ ಸಂತಾಪ ವ್ಯಕ್ತಪಡಿಸುತ್ತದೆ ಮತ್ತು ಮೃತರ ಆತ್ಮಕ್ಕೆ ಶಾಂತಿ ಕೋರುತ್ತದೆ.

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂಧಿ ಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ "ಜನಪದ ವಿಚಾರದ ವಾರ್ಷಿಕ ಚಂದಾ ೧೦೦/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

–ಪ್ರಕಾಶಕರು

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com